

DATTA PRAKASHA
Spiritual Bi-monthly

RNI REGD. No. KARKAN / 2000 / 8[illegible] Dt. 19-09-2003 PERIODICALS

If undelivered, please return to,
DATTA PRAKASHA,
Odiyoor Shree Gurudevadatta Samsthanam
Post: Odiyoor - 574 243,
Bantwal Tq. D. K.

To,

# ದತ್ತ ಪ್ರಕಾಶ

(ಆಧ್ಯಾತ್ಮಿಕ ದ್ವೈಮಾಸಿಕ)

ಬಿಡಿ ಪ್ರತಿ ರೂ.೧೫.೦೦

ಸಂಪುಟ: ೨೦ ಸಂಚಿಕೆ: ೪
ವಿಕಾರಿ ನಾಮ ಸಂವತ್ಸರ
ಆಶ್ವಿನ-ಕಾರ್ತಿಕ
ಅಕ್ಟೋಬರ್-ನವಂಬರ ೨೦೧೯



ಪ್ರಕಾಶಕರು: ಶ್ರೀ ಗುರುದೇವ ಪ್ರಕಾಶನ,
ಶ್ರೀ ದತ್ತತತ್ತ್ವ ಜ್ಞಾನ ಪ್ರಚಾರ ಸಮಿತಿ, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್

## ತಾ.02–10–2019ರಂದು ಜರಗಿದ ಶ್ರೀ ಲಲಿತಾ ಪಂಚಮಿ ಮಹೋತ್ಸವದ ಸಂಭ್ರಮ



ಲೋಕಕಲ್ಯಾಣಾರ್ಥವಾಗಿ ಜರಗಿದ ಶ್ರೀ ಚಂಡಿಕಾ ಯಾಗದ ಪೂರ್ಣಾಹುತಿ



ಅಕ್ಟೋಬರ 5ರಿಂದ 8ರ ತನಕ ಶ್ರೀ ಸಂಸ್ಥಾನದಲ್ಲಿ ಆರಾಧಿಸಲ್ಪಟ್ಟ ಶ್ರೀ ಶಾರದಾ ಮಾತೆ



ವಿದ್ಯಾದಶಮಿಯಂದು ಪೂಜ್ಯ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಂಪನ್ನಗೊಂಡ ಸಾಮೂಹಿಕ ವಿದ್ಯಾರಂಭ



ತಾ.02–10–2019ರಂದು ಜರಗಿದ ಶ್ರೀ ಲಲಿತಾ ಪಂಚಮಿ ಮಹೋತ್ಸವದ ಸಂಭ್ರಮ



ಪೂರ್ವಾಹ್ನ ಜರಗಿದ ಧರ್ಮಸಭೆಯಲ್ಲಿ ಪೂಜ್ಯ ಶ್ರೀಗಳವರಿಂದ ನವರಾತ್ರಿಯ ಅನುಗ್ರಹ ಸಂದೇಶ



ಕರ್ನಾಟಕ ಶಾಸ್ತ್ರೀಯ ಸಂಗೀತ ವಿದುಷಿ ಸಾವಿತ್ರಿ ಈಶ್ವರ ಭಟ್ ಅಮೈ ಅವರಿಗೆ ಶ್ರೀ ಗುರುದೇವಾನುಗ್ರಹ ಪುರಸ್ಕಾರ



ಚಲನಚಿತ್ರ ನಟ, ಭಾಷಾಂತರಕಾರ, ಸಂಘಟಕ, ರಂಗ ಕಲಾವಿದ ಶ್ರೀ ಕಾಸರಗೋಡು ಚಿನ್ನಾ ಅವರಿಗೆ ಶ್ರೀ ಗುರುದೇವಾನುಗ್ರಹ ಪುರಸ್ಕಾರ



ಖ್ಯಾತ ಯಕ್ಷಗಾನ ಕಲಾವಿದ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ
ಶ್ರೀ ಸೀತಾರಾಮ ಕುಮಾರ್ ಕಟೀಲು ಅವರಿಗೆ 'ಶ್ರೀ ಗುರುದೇವಾನುಗ್ರಹ ಪುರಸ್ಕಾರ'



ತುಳು ನಾಟಕ ರಚನೆಗಾರ, ನಿರ್ದೇಶಕ, ನಿರ್ಮಾಪಕ ಶ್ರೀ ಕೃಷ್ಣ ಜಿ.ಮಂಜೇಶ್ವರ ಅವರಿಗೆ
'ಶ್ರೀ ಗುರುದೇವಾನುಗ್ರಹ ಪುರಸ್ಕಾರ'



ಚಿತ್ರಕಲಾ ಶಿಕ್ಷಕ ಶ್ರೀ ತಾರಾನಾಥ ಕೈರಂಗಳ ಅವರಿಗೆ 'ಶ್ರೀ ಗುರುದೇವಾನುಗ್ರಹ ಪುರಸ್ಕಾರ'



'ಅಬ್ಬಕ್ಕ ಟಿ.ವಿ.' ಆಡಳಿತ ನಿರ್ದೇಶಕ ಶ್ರೀ ಶಶಿಧರ ಪೊಯ್ಯತ್ತಬೈಲ್ ಅವರಿಗೆ 'ಶ್ರೀ ಗುರುದೇವಾನುಗ್ರಹ ಪುರಸ್ಕಾರ'



ತಾ.02–10–2019ರಂದು ಜರಗಿದ ಶ್ರೀ ಲಲಿತಾ ಪಂಚಮಿ ಮಹೋತ್ಸವದ ಸಂಭ್ರಮ



'ಶ್ರೀ ಹನುಮಗಂಗಾ ಪುಷ್ಕರಿಣಿ'ಯನ್ನು ಸಮರ್ಪಿಸಿದ ಶ್ರೀ ವಾಮಯ್ಯ ಬಿ. ಶೆಟ್ಟಿ ಮತ್ತು ಶ್ರೀಮತಿ ರೇವತಿ ವಾಮಯ್ಯ ಬಿ. ಶೆಟ್ಟಿ ದಂಪತಿಗಳನ್ನು ಶ್ರೀ ಸಂಸ್ಥಾನದಿಂದ ಪೂಜ್ಯ ಶ್ರೀಗಳವರು ಸನ್ಮಾನಿಸಿ ಗೌರವಿಸಿದರು.



'ಶ್ರೀ ಹನುಮಗಂಗಾ ಪುಷ್ಕರಿಣಿ'ಯ ನಿರ್ಮಾಣದ ತಾಂತ್ರಿಕ ಕಾರ್ಯದಲ್ಲಿ ತೊಡಗಿಸಿ, ಪೋಷಕರಾಗಿಯೂ ಸಹಕರಿಸಿದ ಶ್ರೀ ಎ. ಅಶೋಕ್ ಕುಮಾರ್ ದಂಪತಿಗಳನ್ನು ಪೂಜ್ಯ ಶ್ರೀಗಳವರು ಸನ್ಮಾನಿಸಿ ಹರಸಿದರು.



ಇತ್ತೀಚೆಗೆ ಭೀಕರ ನೆರೆಯಿಂದಾಗಿ ಬಾಕ್ರಬೈಲ್ ಪಾತೂರಿನಲ್ಲಿ ಮನೆ ಕಳೆದುಕೊಂಡ ಬಂಧುಗಳಿಗೆ
ಶ್ರೀ ಸಂಸ್ಥಾನದಿಂದ ಸಹಾಯಹಸ್ತ ವಿತರಣೆ



ಯಕ್ಷಗಾನ ಕಲಾವಿದ ಶ್ರೀ ಡಿ. ಮನೋಹರ್‌ಕುಮಾರ್‌ರವರ ಷಷ್ಟ್ಯಬ್ದಿಯ ಪ್ರಯುಕ್ತ ಯಕ್ಷ ತುಳು ಪರ್ಬ, ಮಂಗಳೂರು ಇವರಿಂದ ತುಳು ಯಕ್ಷಗಾನ ಬಯಲಾಟ ಸಪ್ತಾಹ ಆಯೋಜನೆ. ಈ ಪ್ರಯುಕ್ತ ತಾ.23-08-2019ರಂದು ಶ್ರೀ ಸಂಸ್ಥಾನದಲ್ಲಿ ಯಕ್ಷಗಾನ ಬಯಲಾಟದ ಸಂದರ್ಭ ಜರಗಿದ ಸಭಾ ಕಾರ್ಯಕ್ರಮ – ಪೂಜ್ಯ ಶ್ರೀಗಳವರಿಂದ ಆಶೀರ್ವಚನ



ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಜೈ ಗುರುದೇವ ಕಲಾಕೇಂದ್ರ, ಒಡಿಯೂರು ಇದರ ವತಿಯಿಂದ ಏರ್ಪಡಿಸಿದ್ದ ಮುದ್ದುಕೃಷ್ಣ ವೇಷ ಸ್ಪರ್ಧೆ – ಪೂಜ್ಯ ಶ್ರೀಗಳವರಿಂದ ಉದ್ಘಾಟನೆ



ಪೂಜ್ಯ ಶ್ರೀಗಳವರಿಂದ ದೀಪೋಜ್ವಲನದೊಂದಿಗೆ ಒಡಿಯೂರು ಶ್ರೀ ಗುರುದೇವ ಐ.ಟಿ.ಐ.ನ 2019-20 ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳ ಪ್ರವೇಶೋತ್ಸವ – ತರಬೇತಿ ಪೂರೈಸಿದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ.




# ದತ್ತ ಪ್ರಕಾಶ (ಆಧ್ಯಾತ್ಮಿಕ ದ್ವೈಮಾಸಿಕ)

ವಿಕಾರಿ ನಾಮ ಸಂವತ್ಸರ — ಆಶ್ವಿನ –ಕಾರ್ತಿಕ

ಒಕ್ಟೋಬರ್–ನವಂಬರ 2019 — ಸಂಪುಟ–೨೦ ಸಂಚಿಕೆ–೪



ಸಂಸ್ಥಾಪಕರು : ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು

ಗೌರವ ಸಂಪಾದಕರು : ಸಾಧ್ವಿ ಶ್ರೀ ಶ್ರೀ ಮಾತಾನಂದಮಯೀ

ಪ್ರಧಾನ ಸಂಪಾದಕರು: ಶ್ರೀ ಮುಳಿಯ ಶಂಕರ ಭಟ್ಟ, ಎಂ.ಎ.

ಸಂಪಾದಕರು : ಶ್ರೀ ಹಿರಣ್ಯ ವೆಂಕಟೇಶ್ವರ ಭಟ್, ಎಂ.ಎ.

## ಸಲಹಾ ಮಂಡಳಿ:

ಪ್ರೊ. ವಿ. ಬಿ. ಅರ್ತಿಕಜೆ, ಪುತ್ತೂರು

ಶ್ರೀ ಪ್ರಕಾಶ್ ಎಲ್. ಶೆಟ್ಟಿ,
ಹೈಕೋರ್ಟ್ ನ್ಯಾಯವಾದಿಗಳು, ಮುಂಬೈ

ಶ್ರೀ ಯಶವಂತ ವಿಟ್ಲ

ಶ್ರೀ ಒ. ಶ್ಯಾಮ ಭಟ್,
ನ್ಯಾಯವಾದಿಗಳು, ಮೈಸೂರು

ಶ್ರೀ ಪ್ರಕಾಶ್ ಕೆ. ಶೆಟ್ಟಿ ಪೇಟೆಮನೆ, ಮುಂಬೈ

## ಸ್ಥಾಪಕ ಸದಸ್ಯರು:

ಶ್ರೀ ವಾಮಯ್ಯ ಬಿ. ಶೆಟ್ಟಿ, ಚೆಂಬೂರು,
ಶ್ರೀ ದಯಾನಂದ ಹೆಗ್ಡೆ, ಮುಲುಂಡ್
ಶ್ರೀ ಸದಾಶಿವ ಬಿ. ಶೆಟ್ಟಿ, ಬಾಂದ್ರಾ, ಮುಂಬೈ
ಶ್ರೀ ಜಯಂತ್ ಆರ್. ಪಕಳ, ನಲಸೊಪರ
ಶ್ರೀ ಎಚ್.ಕೆ. ಪುರುಷೋತ್ತಮ, ದತ್ತನಗರ
ಶ್ರೀ ವಿಶ್ವನಾಥ ಶೆಟ್ಟಿ, ಚೆಂಬೂರು, ಮುಂಬೈ
ಶ್ರೀ ರಮೇಶ್ ಶೆಟ್ಟಿ, ಸಿ.ಬಿ.ಡಿ., ನವಿಮುಂಬೈ
ಶ್ರೀಮತಿ ಸೌಮ್ಯಾ ಕೃಷ್ಣ ಪಿ. ಶೆಟ್ಟಿ, ಕುರ್ಲಾ
ಶ್ರೀಮತಿ ಯಶೋದಾ ಕೃಷ್ಣ ಕುಂಬ್ಳೆ ಮಂಗಳೂರು


## ಪುಟ ತೆರೆದಂತೆ...


- ಅಮೃತವರ್ಷ..........5
- ಶ್ರೀಹನುಮಗಂಗಾ ಪುಷ್ಕರಿಣಿ..........8
  ಯಶವಂತ್ ವಿಟ್ಲ
- ಕಥಾರಶ್ಮಿ..........9
  ಪ್ರೊ. ವಿ.ಬಿ. ಅರ್ತಿಕಜೆ, ಪುತ್ತೂರು
- ಸಮರ್ಥ ಗುರು ರಾಮದಾಸರು..........11
  ಕೃಷ್ಣ ಭಟ್ ಪಿ.ಎಸ್.
- ಶ್ರೀಮದ್ವಾಲ್ಮೀಕಿ ರಾಮಾಯಣಮ್..........13
  ಮಲಾರು ಜಯರಾಮ ರೈ
- ಆಹಾರ ನಿಯಮ..........16
  ವೇ|ಬ್ರ|ಶ್ರೀ|ಪ್ರೊ| ಕೆ. ಕೇಶವಮೂರ್ತಿ
- ಗುರುಕೃಪೆಯಿಂದ ಚತುರ್ಧಾಮ ದರ್ಶನ..........19
  ಪ್ರೊ. ಎಂ. ಚಂದ್ರಪ್ರಭಾ ಆರ್. ಹೆಗ್ಡೆ
- ಯೋಗವಾಸಿಷ್ಠ ಬೋಧಾಮೃತ..........22
  ಟಿ.ಎನ್. ಶಿವಕುಮಾರ್, ಬೆಂಗಳೂರು
- ಪಶ್ಚಿಮಮುಖಿಗಳು..........25
  ಡಾ. ವಸಂತಕುಮಾರ ಪೆರ್ಲ
- ನಾರದ ಭಕ್ತಿಸೂತ್ರ..........29
  ಗೀತಾ ರಮೇಶ್
- ಸ್ತ್ರೀಯ ಆಭರಣ–ಅಲಂಕಾರಗಳ ವೈಜ್ಞಾನಿಕ ಹಿನ್ನಲೆ..........31
  ಯು.ಎನ್. ಸಂಗನಾಳಮಠ, ಹೊನ್ನಾಳಿ
- ಪದಪ್ರಕಾಶ..........35
  ಶ್ರೀಮತಿ ನಳಿನಿ ಜಿ.ಭಟ್ ಸೇರಾಜೆ
- ಸಂಸ್ಥಾನ ವಾರ್ತೆ.......... 36
- ಪರಿಭ್ರಮಣ..........45


ಹಿಂಬದಿ ರಕ್ಷಾಪುಟ: ಶ್ರೀ ಸಂಸ್ಥಾನದಲ್ಲಿ ಜರಗಿದ ಶ್ರೀ ಲಲಿತಾಪಂಚಮಿ ಮಹೋತ್ಸವ
ಶ್ರೀ ಹನುಮಗಂಗಾ ಪುಷ್ಕರಿಣಿಯ ಸಮರ್ಪಣೆ

# ದತ್ತ ಪ್ರಕಾಶ (ಆಧ್ಯಾತ್ಮಿಕ ದ್ವೈಮಾಸಿಕ)

| ಚಂದಾ ವಿವರ | | ಜಾಹೀರಾತು ವಿವರ (ಒಂದು ಸಂಚಿಕೆಗೆ) | |
|---|---|---|---|
| ವಾರ್ಷಿಕ ಚಂದಾ | ₹. 100.00 | | |
| 5 ವರ್ಷಕ್ಕೆ | ₹. 500.00 | ಒಳಪುಟ | ₹. 5,000.00 |
| 10 ವರ್ಷಕ್ಕೆ | ₹. 1,000.00 | ಅರ್ಧಪುಟ | ₹. 2,500.00 |
| ಸ್ಥಾಪಕ ಸದಸ್ಯರು | ₹. 10,000.00 | ಕಾಲು ಪುಟ | ₹. 1,500.00 |

ಬಿಡಿ ಪತ್ರಿ: ₹. 15.00

(ಖಾಯಂ ಜಾಹೀರಾತುದಾರರು ವಿಶೇಷ ರಿಯಾಯಿತಿ ದರಗಳ ವಿವರಕ್ಕಾಗಿ ಬರೆಯಿರಿ)

ವೈಯಕ್ತಿಕವಾಗಿ, ಸೇವಾ ಸಂಸ್ಥೆಗಳ ಪರವಾಗಿ ಖಾಯಂ ಜಾಹೀರಾತು ನೀಡುವವರು, ಸಂಚಿಕೆ ಪ್ರಕಟಣೆಯ ಆಂಶಿಕ ಅಥವಾ ಪೂರ್ಣ ಪ್ರಾಯೋಜಕರಾಗಿ ಸಹಕರಿಸುವ ದಾನಿಗಳು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ. ಅಭಿಮಾನಿಗಳು ತಮ್ಮ ದೇಣಿಗೆಗಳನ್ನು ಸಿಂಡಿಕೇಟ್ ಬ್ಯಾಂಕ್, ಕನ್ಯಾನ ಇದರ ಖಾತೆ ಸಂಖ್ಯೆ 22024990ಕ್ಕೆ ಜಮೆಮಾಡಿ ಸಹಕರಿಸಬೇಕೆಂದು ಕೋರಲಾಗಿದೆ.

ದತ್ತ ತತ್ತ್ವದ ಮುಖವಾಣಿಯಾಗಿರುವ 'ದತ್ತ ಪ್ರಕಾಶ' ಪತ್ರಿಕೆಯನ್ನು ಪ್ರಚಾರ ಮಾಡಲು ಆಸಕ್ತಿ-ಉತ್ಸಾಹವಿರುವ ಏಜೆಂಟರನ್ನು ಸ್ವಾಗತಿಸುತ್ತೇವೆ. ಏಜೆಂಟರು 'ದತ್ತ ಪ್ರಕಾಶ'ದ ಕ್ರಮ-ನಿಯಮಾವಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಪತ್ರಮುಖೇನ ಅಥವಾ ದೂರವಾಣಿಗೆ ಸಂಪರ್ಕಿಸಿ.

<u>ಲೇಖನಗಳಿಗೆ ಸ್ವಾಗತ....</u>

'ದತ್ತ ಪ್ರಕಾಶ'ದಲ್ಲಿ ಪ್ರಕಟಣೆಗೆ ಅನುಕೂಲವಾಗುವಂತಹ ಬರಹಗಳನ್ನು ಸದಾ ಸ್ವಾಗತಿಸುತ್ತೇವೆ. ಆಧ್ಯಾತ್ಮ ಸಂಬಂಧಿ ಕಿರು ಬರಹಗಳನ್ನು ಕಳುಹಿಸಿಕೊಡಬಹುದು. ತಾತ್ತ್ವಿಕ ವಿಚಾರ ಪ್ರತಿಪಾದನೆಯ, ಸನಾತನ ಹಿಂದೂ ಧರ್ಮ – ಸಂಸ್ಕೃತಿಗಳಿಗೆ ಅನ್ವಯಿಸುವಂತಹ ಲೇಖನಗಳೂ ಅಪೇಕ್ಷಣೀಯ. ಪುರಾಣ ಪುರುಷರ, ಸಾಧು–ಸಂತರ ಜೀವನಮೌಲ್ಯವನ್ನು ಸಾರುವ ಲೇಖನಗಳೂ ಆಗಬಹುದು. ಶ್ರೀ ಸಂಸ್ಥಾನದ, ಪೂಜ್ಯ ಶ್ರೀಗಳ ಅಲೌಕಿಕ ಶಕ್ತಿಯ ಕುರಿತಾದ ಅನುಭವ, ಸತ್ಯಘಟನೆಗಳನ್ನೂ ಪ್ರಕಟಿಸುತ್ತೇವೆ. **ತಮ್ಮ ಬರಹಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬಹುದು:**

ಪ್ರಧಾನ ಸಂಪಾದಕರು, 'ದತ್ತ ಪ್ರಕಾಶ', ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್
ಅಂಚೆ: ಒಡಿಯೂರು – 574 243, ಬಂಟ್ವಾಳ ತಾಲೂಕು, ದ. ಕ.
ದೂರವಾಣಿ ಸಂಖ್ಯೆ: 08255–266211, 266282 ಮೊಬೈಲ್ ನಂಬ್ರ: 9448177811

**ಲೇಖನಗಳನ್ನು ನುಡಿ ಅಥವಾ ಬರಹ ತಂತ್ರಾಂಶಗಳಲ್ಲಿ ಮುದ್ರಿಸಿ,**
**e-mail**ನ ಮುಖಾಂತರವೂ info@shreeodiyoor.org ವಿಳಾಸಕ್ಕೆ **ಕಳುಹಿಸಬಹುದು.**

ಸೂಚನೆ: ಸಂಚಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅಭಿಪ್ರಾಯಗಳಿಗೆ ಆಯಾಯ ಲೇಖಕರೇ ಜವಾಬ್ದಾರರು.



## ಅಮೃತವರ್ಷ



# ಆತ್ಮಜ್ಯೋತಿ ಬೆಳಗೋಣ

ನಿಮಗೆಲ್ಲಾ ಬೆಳಕಿನ ಹಬ್ಬದ ಶುಭಾಶಯಗಳು.

ಇದೀಗ ಸಂಭ್ರಮದಲ್ಲಿರುವ ಪರ್ವಕಾಲ. ನವರಾತ್ರಿ, ವಿಜಯದಶಮಿ ಆಚರಿಸಿ ಎದುರು ನೋಡುತ್ತಿರುವ ದೀಪಾವಳಿ ಹಬ್ಬ. ಜನರಲ್ಲಿ ಉತ್ಸಾಹ, ಆಸಕ್ತಿ, ಕ್ರಿಯಾಶೀಲತೆ ಇನ್ನಿತ್ಯಾದಿಗಳು ರೂಪುಗೊಳ್ಳುವ ಸಂದರ್ಭಗಳು.

ಉತ್ಸವಗಳು ಸಂಸ್ಕೃತಿಯ ಬೇರುಗಳಂತೆ. 'ಬೆಳಕು' ಅನ್ನುವಾಗ ಬೇರೆ ಬೇರೆ ರೀತಿಯಲ್ಲಿ ಅರ್ಥೈಸಬಹುದು. ಸೂರ್ಯ, ಚಂದ್ರ, ದೀಪ, ಶಬ್ದ ಈ ರೀತಿಯಲ್ಲೂ ಬೆಳಕನ್ನು ವಿಶ್ಲೇಷಿಸಬಹುದು. ಇದಕ್ಕಿಂತಲೂ ಮುಖ್ಯವಾಗಿ ಅಂತರಂಗದಲ್ಲೊಂದು ಶಾಶ್ವತ ಬೆಳಕಿದೆ. ಅದೇ ಆತ್ಮಜ್ಯೋತಿ. ಈ ಬೆಳಕಿನ ಹಬ್ಬವು ಅಂಧಕಾರವನ್ನು ನೀಗಿ ಅರ್ಥಾತ್ ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸಿ, ಜ್ಞಾನದ ಜ್ಯೋತಿಯನ್ನು ಬೆಳಗಿಸಿಕೊಳ್ಳುವುದಕ್ಕೆ ಅನುಕೂಲ. ಬೆಳಕಿಗೆ ಕತ್ತಲೆಯ ಪರಿಚಯವಿಲ್ಲ. ಏಕೆಂದರೆ ಬೆಳಕು ಬರುವಾಗ ಕತ್ತಲೆ ನಿಲ್ಲದು. ಅದರಂತೆ ಜ್ಞಾನ ಉದಿಸಿದಾಗ ಅಜ್ಞಾನವು ಇರದು.

ಇಲ್ಲಿ ನಮಗೆ ಕಾಣುವ 'ಬೆಳಕು' ಅಂದರೆ ಕೃಷ್ಣನೆಂಬ ಬೆಳಕು. ಅಸುರರನ್ನು ಮರ್ದಿಸಿ ಧರ್ಮೋತ್ಥಾನಕ್ಕೆ ನಾಂದಿ ಹಾಡಿದ ದ್ವಾಪರಯುಗದ ಕೃಷ್ಣಾವತಾರದ ಚಿತ್ರಣಗಳು ಮೂಡಿಕೊಳ್ಳುವುದು ಸಹಜ.

ಹಬ್ಬ ಆಚರಿಸುವವರಿಗೊಂದು ಕಿವಿಮಾತನ್ನು ಹೇಳಲೇಬೇಕು. ದೀಪ ಉರಿಸಿ, ಪಟಾಕಿಗಳನ್ನು ಹಾರಿಸಿ ಕಣ್ಣು, ಕಿವಿಯೋ, ಅಂಗಾಂಗಗಳನ್ನು ಕಳಕೊಳ್ಳುವ ಪ್ರಸಂಗಗಳು, ಪಕ್ಕದ ಮನೆಯವರಿಗೂ ತೊಂದರೆಯಾಗುವಂತದ್ದನ್ನು ಈ ಸಂದರ್ಭಗಳಲ್ಲಿ ಕಾಣಬಹುದು. ದಯವಿಟ್ಟು ಹೆತ್ತವರು ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆ ಇದೆ. ಪಟಾಕಿಗಳ ಹೆಸರಲ್ಲಿ ಅನಾಹುತಗಳಾಗದಂತೆ ದೀಪಾವಳಿ ಆಚರಿಸುವುದು ಉತ್ತಮ. ಪಟಾಕಿ ಸಿಡಿಸುವುದೇ ದೀಪಾವಳಿ ಹಬ್ಬವಲ್ಲ.

ಹಬ್ಬ ಹರಿದಿನಗಳು ಸಂಸ್ಕೃತಿಯ ಬೆಳಕಾಗಬೇಕೇ ಹೊರತು ವಿಕೃತಿಗಳನ್ನು ವಿಜೃಂಭಿಸಬಾರದು. ಒಟ್ಟಾರೆಯಾಗಿ ಅಂತರಂಗದ ಕಡೆಗೆ ನೋಡದೆ ಬಾಹ್ಯದಲ್ಲಿ ಹುಡುಕಾಡಿದರೆ ಅಂತರಂಗದ ಜ್ಯೋತಿ ಕಾಣದು. ದೇಹ ಎನ್ನುವ ಹಣತೆಯಲ್ಲಿ ಆತ್ಮಜ್ಯೋತಿ ಎನ್ನುವ ಶಾಶ್ವತಜ್ಯೋತಿಯನ್ನು ಬೆಳಗಿಸೋಣ; ಆಧ್ಯಾತ್ಮಿಗಳಾಗೋಣ.

ಆಶ್ವಿನ ಪೌರ್ಣಮಿ — ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು

## ಶುಭ ಸಂದೇಶ

ಗುರು ಪರಂಪರೆಯನ್ನು ಬೆಳಗಿದ, ಜಗತ್ತನ್ನೇ ಗುರುವಾಗಿಸಿಕೊಂಡ ಭಗವಾನ್ ದತ್ತಾತ್ರೇಯರ ಜಯಂತ್ಯುತ್ಸವವು ಮಾರ್ಗಶಿರ ಮಾಸದಲ್ಲಿ ಸಂಪನ್ನಗೊಳ್ಳುವುದು. ಶ್ರೀ ಗುರುದತ್ತಾತ್ರೇಯರು ಅಜ್ಞಾನದಿಂದ ಸುಜ್ಞಾನದೆಡೆಗೆ ಸಾಗುವ ಸ್ಪಷ್ಟ ಮಾರ್ಗವನ್ನು ತೋರಿಸಿದವರು. ಜೀವನ ಸಾರ್ಥಕ್ಯಕ್ಕೆ, ಜೀವನು ದೇವನೆಡೆಗೆ ಸಾಗುವುದಕ್ಕೆ ಭಾವನಾತ್ಮಕ ಸಂಬಂಧದ ಬೆಸುಗೆ ಅಥವಾ ಸೇತುವೆ ಶ್ರೀಗುರುವು. ಗುರುವಿನ ಆರಾಧನೆಯಿಂದ ಬದುಕನ್ನು ಅರ್ಥಪೂರ್ಣವಾಗಿ ರೂಪಿಸಿಕೊಳ್ಳೋಣ. ಎಲ್ಲರನ್ನೂ ಗುರುಕೃಪೆಯು ಮುನ್ನಡೆಸಲೆಂದು ಪ್ರಾರ್ಥಿಸಿ ಹಾರೈಸುತ್ತೇವೆ.

**ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು**

॥ ಜೈ ಗುರುದೇವ್ ॥



### ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್

**ಶ್ರೀ ದತ್ತಾಂಜನೇಯ ಕ್ಷೇತ್ರ, ದಕ್ಷಿಣ ಗಾಣಗಾಪುರ**

**ಆತ್ಮೀಯ ಕರೆಯೋಲೆ**

ಸ್ವಸ್ತಿ ಶ್ರೀ ವಿಕಾರಿ ನಾಮ ಸಂವತ್ಸರದ ಮಾರ್ಗಶಿರ ಶು॥ ಸಲುವ **ತಾ.05–12–2019**ರಿಂದ ಮಾರ್ಗಶಿರ ಪೌರ್ಣಮಿ **ತಾ.11–12–2019**ರ ತನಕ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರ ಮಾರ್ಗದರ್ಶನದಲ್ಲಿ ವೇ॥ಮೂ॥ ಕುರೋಮೂಲೆ ಚಂದ್ರಶೇಖರ ಉಪಾಧ್ಯಾಯರ ನೇತೃತ್ವದಲ್ಲಿ

**ಶ್ರೀ ದತ್ತ ಜಯಂತಿ ಮಹೋತ್ಸವ–ಶ್ರೀ ದತ್ತ ಮಹಾಯಾಗ ಸಪ್ತಾಹವು**

ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿರುವುದು. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ದತ್ತಾಂಜನೇಯ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷೆ.

**ಕಾರ್ಯನಿರ್ವಾಹಕರು,** ಒಡಿಯೂರು ಶ್ರೀ ಸಂಸ್ಥಾನಮ್

## ಶ್ರೀ ದತ್ತ ಮಹಾಯಾಗದ ಮಹತ್ವ

**ನಮಸ್ತೇ ಯೋಗಿರಾಜೇಂದ್ರ ದತ್ತಾತ್ರೇಯ ದಯಾನಿಧೇ ।**
**ಸ್ಮೃತಿಂ ತೇ ದೇಹಿಮಾಂ ರಕ್ಷ ಭಕ್ತಿಂ ತೇ ದೇಹಿಮೇ ದೃಢಾಮ್ ॥**

ತ್ರಿಮೂರ್ತಿ ಸ್ವರೂಪನಾದ ಭಗವಾನ್ ಶ್ರೀ ದತ್ತಾತ್ರೇಯ ಪ್ರಭುವಿನ ಅವತಾರ ಲೀಲೆಯೇ ಅನುಪಮವಾದುದು. ಜ್ಞಾನ ಪ್ರದಾತನೂ, ಸರ್ವಸೌಖ್ಯ ಕಾರಣನೂ ಆದ ದತ್ತ ಮೂರ್ತಿಯು ಸರ್ವರೋಗ ನಿವಾರಕನು. ದತ್ತಯಜ್ಞವು ಗುರುದೇವನ ಪ್ರಸನ್ನತೆಗೆ ಕಾರಣವು. ದತ್ತ ಯಾಗದಲ್ಲಿ ಭಾಗವಹಿಸುವುದರಿಂದ ಸಂತಾನ ಪ್ರಾಪ್ತಿ, ಚರ್ಮರೋಗಾದಿಗಳ ನಿವಾರಣೆ, ಸರ್ವಾಭೀಷ್ಟ ಸಿದ್ಧಿಫಲಗಳಿರುವುವೆಂದು ವಿದ್ವಜ್ಜನರ ಮತವಾಗಿದೆ.





## ಕಾರ್ಯಕ್ರಮಗಳು

**ತಾ.05–12–2019ನೇ ಗುರುವಾರ**

**ಪ್ರಾತಃಕಾಲ:** ಶ್ರೀ ಗಣಪತಿ ಹವನ, ಶ್ರೀದತ್ತ ಮಹಾಯಾಗ ಸಪ್ತಾಹ ಆರಂಭ, ಶ್ರೀ ದತ್ತ ಮಾಲಾಧಾರಣೆ. **ಸಂಜೆ:** ಪಲ್ಲಕೀ ಉತ್ಸವ

**ತಾ.05–12–2019ನೇ ಗುರುವಾರದಿಂದ ತಾ.11–12–2019ನೇ ಬುಧವಾರದ ತನಕ**

ಬೆಳಗ್ಗೆ ಗಂ.10ರಿಂದ : ಶ್ರೀ ಗುರುಚರಿತ್ರೆ ಪಾರಾಯಣ, ವೇದ ಪಾರಾಯಣ, ಕಲ್ಪೋಕ್ತ ಪೂಜೆ ಮ. ಗಂ.12.30ರಿಂದ: ಮಹಾಪೂಜೆ, ಮಹಾಸಂತರ್ಪಣೆ. ರಾತ್ರಿ : **ರಂಗಪೂಜೆ, ಬೆಳ್ಳಿರಥೋತ್ಸವ**

**ತಾ.11–12–2019ನೇ ಬುಧವಾರ**

| | |
|---|---|
| ಬೆಳಗ್ಗೆ ಗಂ.10ರಿಂದ | : **ಪೂಜ್ಯ ಶ್ರೀಗಳವರ ದಿವ್ಯೋಪಸ್ಥಿತಿಯಲ್ಲಿ ಧರ್ಮಸಭೆ** |
| ಗಂಟೆ 12ರಿಂದ | : ವೇದಪಾರಾಯಣ–ಶ್ರೀಗುರುಚರಿತ್ರೆಪಾರಾಯಣ ಸಮಾಪ್ತಿ, **ಶ್ರೀದತ್ತ ಮಹಾಯಾಗದ ಪೂರ್ಣಾಹುತಿ**,ಕಲ್ಪೋಕ್ತ ಪೂಜೆ, ಮಹಾಪೂಜೆ, **ಶ್ರೀದತ್ತ ಸಂಪ್ರದಾಯದಂತೆ ಮಧುಕರಿ ಸೇವೆ ಮಂತ್ರಾಕ್ಷತೆ** ನಂತರ ಪ್ರಸಾದ ವಿತರಣೆ |
| ರಾತ್ರಿ ಗಂ.7.00ರಿಂದ | : **ರಂಗಪೂಜೆ, ಉಯ್ಯಾಲೆ ಸೇವೆ, ವಿಶೇಷ ಬೆಳ್ಳಿ ರಥೋತ್ಸವ** |
| ರಾತ್ರಿ ಗಂ.9.30ರಿಂದ | : **ಪೆರ್ಡೂರು ಮೇಳದವರಿಂದ ಯಕ್ಷಗಾನ ಬಯಲಾಟ** |
| ಪ್ರಾಯೋಜಕರು | : **ಶ್ರೀಮತಿ** ಮತ್ತು **ಶ್ರೀ ಬೋಳಾರ ಕರುಣಾಕರ ಶೆಟ್ಟಿ** |

~: ಗುರುಭಜಕರ ಅವಗಾಹನೆಗೆ :~

**ಶ್ರೀ ಗುರುದತ್ತಾತ್ರೇಯರ ಅವತಾರ ವಿಶೇಷ ಸಮರಸ ತತ್ತ್ವವನ್ನು ಜಗತ್ತಿಗೆ ಸಾರಿ, ವಿಶ್ವ ಮಾನವ ಧರ್ಮದ ಅರಿವು ಮೂಡಿಸುವುದೇ ಆಗಿದೆ. ಇಂತಹ ತತ್ತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಿದ್ಧರಿರುವ ಗುರುಭಜಕರಿಗೆ 'ಮಾಲಾಧಾರಣೆ' (ವ್ರತಾಚರಣೆ) ಮಾಡುವುದಕ್ಕೆ ಸಪ್ತಾಹ ಪರ್ಯಂತ ಅವಕಾಶವನ್ನು ಕಲ್ಪಿಸಲಾಗಿದೆ. ಅಪೇಕ್ಷಿತರು ತಾ.05–12–2019ನೇ ಗುರುವಾರ ಬೆಳಗ್ಗೆ 9.00ಗಂಟೆಗೆ ಶ್ರೀ ಸಂಸ್ಥಾನದಲ್ಲಿ ಹಾಜರಿರತಕ್ಕದ್ದು.**

**ನಿಯಮಗಳು:** ಎರಡು ಹೊತ್ತು ಸ್ನಾನ, ಏಕಭುಕ್ತರಾಗಿ(ಒಂದು ಹೊತ್ತು ಊಟ), ಸಾತ್ವಿಕರಾಗಿ, ತ್ರಿಕರಣಪೂರ್ವಕ ಶ್ರೀ ಗುರುದತ್ತಾತ್ರೇಯರ ಸ್ಮರಣೆಯೊಂದಿಗೆ ನಿತ್ಯ ಕಾರ್ಯಗಳಲ್ಲಿ ತೊಡಗುವುದು. ಶ್ರೀಗುರುಚರಿತ್ರೆ ಪಾರಾಯಣಕ್ಕೆ ಅವಕಾಶ ಇದೆ.

- **ಶ್ರೀ ದತ್ತ ಮಹಾಯಾಗ ಸಪ್ತಾಹದಲ್ಲಿ ₹501/–, ₹1,001/– ಅಥವಾ ಹೆಚ್ಚು ನೀಡಿಯೂ ಪೋಷಕರಾಗಿ ಸಹಕರಿಸಬಹುದು.**
- **ಅನ್ನಸಂತರ್ಪಣಾ ಸೇವೆ, ಬೆಳ್ಳಿರಥೋತ್ಸವ ಸೇವೆ, ರಂಗಪೂಜಾ ಸೇವೆಗಳಿಗೆ ಅವಕಾಶವಿದೆ. ಆಸಕ್ತರು ಶ್ರೀ ಸಂಸ್ಥಾನದ ಸೇವಾವಿಭಾಗದಲ್ಲಿ ವಿಚಾರಿಸಬಹುದು.**

## ಒಡಿಯೂರು ಶ್ರೀ ಸಂಸ್ಥಾನದಲ್ಲಿ ಸಾಕಾರಗೊಂಡ 'ಶ್ರೀ ಹನುಮಗಂಗಾ ಪುಷ್ಕರಿಣಿ'

● ಯಶವಂತ ವಿಟ್ಲ

ಪರಮಪೂಜ್ಯ ಒಡಿಯೂರು ಶ್ರೀಗಳವರ ಸಾಧನಾ ಕ್ಷೇತ್ರ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದಲ್ಲಿ ಬಹಳ ಆಕರ್ಷಣೀಯವಾದ 'ಶ್ರೀ ಹನುಮಗಂಗಾ ಪುಷ್ಕರಿಣಿ' ಸಾಕಾರಗೊಂಡು ದೇಗುಲದ ಪಾವಿತ್ರ್ಯವನ್ನು ಹೆಚ್ಚಿಸಿದೆ.

ಮುಂಬೈಯ ಉದ್ಯಮಿ ಶ್ರೀ ವಾಮಯ್ಯ ಬಿ. ಶೆಟ್ಟಿ ಮತ್ತು ಶ್ರೀಮತಿ ರೇವತಿ ವಾಮಯ್ಯ ಶೆಟ್ಟಿ ಅವರು ಶ್ರೀ ಸಂಸ್ಥಾನದಲ್ಲಿ ಸುಂದರವಾಗಿ ನಿರ್ಮಿಸಿಕೊಟ್ಟ 'ಹನುಮಗಂಗಾ ಪುಷ್ಕರಿಣಿ'ಯನ್ನು ಒಡಿಯೂರು ಶ್ರೀಗಳವರ ಮತ್ತು ಶ್ರೀ ಮಾತೆಯವರ ದಿವ್ಯ ಸಾನಿಧ್ಯದಲ್ಲಿ, ಗುರುಬಂಧುಗಳ ಉಪಸ್ಥಿತಿಯಲ್ಲಿ ಶ್ರೀ ವಾಮಯ್ಯ ಬಿ. ಶೆಟ್ಟಿ ದಂಪತಿ ಹಾಗೂ ಅವರ ಪುತ್ರಿ, ಮೊಮ್ಮಗಳು ಶ್ರೀ ಲಲಿತಾ ಪಂಚಮಿ ಮಹೋತ್ಸವದಂದು ಒಡಿಯೂರು ಶ್ರೀ ಸಂಸ್ಥಾನಕ್ಕೆ ಸಮರ್ಪಿಸಿದರು.

ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರ ದಿವ್ಯ ಕಲ್ಪನಾಶಕ್ತಿಯ ಮೂರ್ತ ಸ್ವರೂಪವಾಗಿ ಈ ಪುಷ್ಕರಿಣಿ ನಿರ್ಮಾಣಗೊಂಡಿದೆ. ಕಲಾತ್ಮಕವಾಗಿ ಮೂಡಿಬಂದಿರುವ ಶ್ರೀ ಹನುಮಗಂಗಾ ಪುಷ್ಕರಿಣಿ ಒಡಿಯೂರು ಶ್ರೀ ದತ್ತಾಂಜನೇಯ ದೇಗುಲದ ವಿಶೇಷ ಆಕರ್ಷಣೆಯಾಗಿದೆ. ನಿತ್ಯಹರಿದ್ವರ್ಣದ ರಮಣೀಯ ವನಸಿರಿ ಕಲೆಂಜಿಮಲೆಯ ಹಿನ್ನಲೆಯಲ್ಲಿ, ಆಪ್ಯಾಯಮಾನವಾದ ಕಲ್ಪವೃಕ್ಷಗಳ ಮಧ್ಯದ ಪುಷ್ಕರಿಣಿಯ ಉತ್ತರಭಾಗದಲ್ಲಿ ನಿರ್ಮಿಸಿದ ವಿಶಿಷ್ಟ ಕಲಾಕೃತಿಯಲ್ಲಿ ಶ್ರೀ ದತ್ತಗುರು ಮತ್ತು ಶ್ರೀ ಆಂಜನೇಯನ ಬಿಂಬ ದಿವ್ಯ ತೇಜಸ್ಸಿನಿಂದ ಗಮನ ಸೆಳೆಯುತ್ತದೆ. ಸಮೀಪದಲ್ಲಿರುವ ಕಾಮಧೇನು, ಹನುಮ, ನವಿಲು ಮೂರ್ತಿಗಳಿಗೆ ಪ್ರಾಕೃತಿಕವಾದ ಆಕರ್ಷಣೆ ಇದೆ.

ಈ ಸುಂದರ ಶಿಲ್ಪ ರಚನೆಯನ್ನು ಸೂಕ್ಷ್ಮವಾಗಿ ವೀಕ್ಷಿಸಿದಾಗ, ಪೂರ್ವದಲ್ಲಿ ಹನುಮ, ಪಶ್ಚಿಮದಲ್ಲಿ ಗರುಡ, ಮಧ್ಯದಲ್ಲಿ ಸುಮುಖ ಮೂಡಿದೆ. ಶ್ರೀ ಸಂಸ್ಥಾನದಲ್ಲಿ ನೆಲವನ್ನು ಕೊರೆದು ವಿಶಿಷ್ಟವಾಗಿ ನಿರ್ಮಿಸಿದ ನಿತ್ಯಾನಂದ ಗುಹೆಯಲ್ಲಿರುವ ಪುಟ್ಟ ಜಲಾಶಯದ ಆಗ್ನೇಯ ಭಾಗದಲ್ಲಿರುವ 'ಹನುಮ ಗಂಗೆ' ಒರತೆ ನೀರವಾಗಿ ಶ್ರೀ ಹನುಮಗಂಗಾ ಪುಷ್ಕರಿಣಿಗೆ ಗೋಮುಖದ ಮೂಲಕ ಸೇರುತ್ತದೆ.

ಇದೆಲ್ಲವೂ ಪೂಜ್ಯ ಶ್ರೀಗಳವರ ದಿವ್ಯ ಚಿಂತನಾ ದೃಷ್ಟಿಯಿಂದ ಸಾಕಾರಗೊಂಡಿದೆ.





## ಕಥಾರಶ್ಮಿ

● ಪ್ರೊ. ವಿ. ಬಿ. ಅರ್ತಿಕಜೆ,
ಪುತ್ತೂರು

**ಪ್ರಸನ್ನತೆ:** ಥಿಯೊಡೋರ್ ರೂಸ್‌ವೆಲ್ಟ್ (1858–1919) ಅಮೆರಿಕದ (ಸಂಯುಕ್ತ ಸಂಸ್ಥಾನಗಳು) ರಾಷ್ಟ್ರಪತಿಯಾಗಿ ಆಯ್ಕೆಯಾಗುವುದು ಅಲ್ಲಿನ ಒಂದು ಪತ್ರಿಕೆಗೆ ಸುತರಾಂ ಇಷ್ಟವಿರಲಿಲ್ಲ. ಆದ್ದರಿಂದ ಅವರ ಅತ್ಯಂತ ಅಸಹ್ಯಕರ ನೋಟದ ಭಾವಚಿತ್ರವೊಂದನ್ನು ತೆಗೆದುಕೊಡುವಂತೆ ಒಬ್ಬ ಚಿತ್ರಗ್ರಾಹಕನನ್ನು ನೇಮಿಸಿತು. ಅಂತಹ ಭಾವಚಿತ್ರ ಪ್ರಕಟವಾದರೆ ಮತದಾರರು ರೂಸ್‌ವೆಲ್ಟ್‌ರಿಂದ ದೂರ ಸರಿಯುವರೆಂದು ಪತ್ರಿಕೆ ಭಾವಿಸಿತು.

ಕೊನೆಗೂ ಆ ಬಗೆಯ ಫೋಟೋ ತೆಗೆಯುವಲ್ಲಿ ಆತ ಯಶಸ್ವಿಯಾದ. ಪತ್ರಿಕೆ ಅದಕ್ಕೆ ಸಾಕಷ್ಟು ಪ್ರಚಾರವನ್ನೂ ನೀಡಿತು. ಸದಾ ಪ್ರಸನ್ನಚಿತ್ತರಾಗಿ ಓಡಾಡುತ್ತಿದ್ದ ಥಿಯೊಡೋರ್ ಅವರ ಕುರೂಪಿ ಚಿತ್ರ ತೆಗೆಯಲು ತಾನು ಬಹಳ ಕಷ್ಟಪಟ್ಟದ್ದಾಗಿಯೂ ಏಳು ವಾರಗಳ ಕಾಲ ಎಡೆಬಿಡದೆ ಕಾದು ಕುಳಿತದ್ದಾಗಿಯೂ ಚಿತ್ರಗ್ರಾಹಕ ಒಪ್ಪಿಕೊಂಡ. ರೂಸ್‌ವೆಲ್ಟ್ ತಮ್ಮ ಎಂದಿನ ಮುಗುಳನ್ನಗೆಯೊಂದಿಗೆ ಹೀಗೆ ಹೇಳಿದರು: "ಏಳು ವಾರಕ್ಕೊಮ್ಮೆ ನಾನು ಅಷ್ಟು ಕೆಟ್ಟದಾಗಿ ಕಾಣಿಸಿಕೊಳ್ಳುವುದಾದರೆ ಹೆಚ್ಚಿನ ಸಮಯ ಅಸಹ್ಯವದನನಾಗಿ ಇರುವುದಿಲ್ಲವೆಂದು ಅರ್ಥ."

**ಪ್ರಾರ್ಥನೆಗೆ ತಕ್ಕ ಫಲ:**

ಅದೊಂದು ಈಶ್ವರ ದೇವಾಲಯ. ಅಲ್ಲಿ ವರ್ಷಕ್ಕೆ ಒಮ್ಮೆಯೋ ಎರಡು ಸಲವೋ ಎಳನೀರು ಅಭಿಷೇಕ ನಡೆಯುವುದುಂಟು. ಇದರ ಸಾಮಾನ್ಯ ಉದ್ದೇಶ ಶಾಂತಿ ಮತ್ತು ಸುಭಿಕ್ಷ. ಆದರೆ ಬೇಸಗೆಯ ಕೊನೆಯ ದಿನಗಳಲ್ಲಿ ಕೆರೆ–ಬಾವಿಗಳೆಲ್ಲ ಬತ್ತಿ ಕುಡಿಯುವ ನೀರಿಗೇ ಹಾಹಾಕಾರ ಉಂಟಾದಾಗ ಮಾಡುವ ಅಭಿಷೇಕದ ಉದ್ದೇಶ ಮಾತ್ರ ವರುಣನ ಕೃಪೆ, ತೃಷೆ ತಣಿಸುವ ಮಳೆ.

ಆ ವರ್ಷ ಯಾವುದೋ ಕಾರಣಕ್ಕೆ ಸುಡು ಬೇಸಗೆಯಲ್ಲಿ ವಿಶೇಷ ಜಾತ್ರೆ ಜರುಗಿತು. ರಥಬೀದಿಯ ಸುತ್ತಮುತ್ತ ಸಂತೆ ಸೇರಿತ್ತು. ಅದೇ ಸಂದರ್ಭದಲ್ಲಿ ಆಸ್ತಿಕರು ಒಟ್ಟು ಸೇರಿ ಬೊಂಡ ಅಭಿಷೇಕ ಏರ್ಪಡಿಸಿದರು.

ವಿಶಿಷ್ಟ ಸಂದರ್ಭವಾದ್ದರಿಂದ ದಾಖಲೆ ಸಂಖ್ಯೆಯ ಎಳನೀರು ಸಂಗ್ರಹವಾಗಿತ್ತು. ಭಕ್ತಜನರು ತಂಡೋಪತಂಡವಾಗಿ ಸೇರಿದರು. ಅಭಿಷೇಕದ ಗೌಜಿ ಹೇಳತೀರದು.

ಆದರೆ ನಿರೀಕ್ಷೆಯಂತೆ ಮಳೆ ಬರಲಿಲ್ಲ. ಕಾರಣ ವಿಚಾರಿಸಿದಾಗ ಕಾರ್ಯಕ್ರಮದಲ್ಲಿ ಭಾಗವಹಿಸಿದ ಭಕ್ತನೊಬ್ಬ ಗುಟ್ಟಿನಲ್ಲಿ ಬಾಯಿಬಿಟ್ಟ. “ವ್ಯಾಪಾರ ವ್ಯವಹಾರಗಳಿಗೆ ಅಡ್ಡಿಯಾಗುವುದರಿಂದ ಹೆಚ್ಚಿನವರು ಮಳೆ ಬರಬಾರದೆಂದೇ ಪ್ರಾರ್ಥಿಸಿದ್ದರು. ದೇವರು ತಥಾಸ್ತು ಎಂದರು.”

## ಪ್ರೀತಿ ಇರುವಲ್ಲಿ..:

ಮಹಿಳೆಯೊಬ್ಬಳು ಮನೆಯ ಹೊರಗಿನ ಜಗಲಿಯಲ್ಲಿ ಕುಳಿತಿದ್ದ ಮೂವರು ತರುಣಿಯರನ್ನು ಕಂಡು ಆಶ್ಚರ್ಯಚಕಿತಳಾದಳು. ಅವರು ಹಸಿದವರಂತೆ ತೋರಿದ ಕಾರಣ “ದಯವಿಟ್ಟು ಒಳಗೆ ಬನ್ನಿ. ತಿನ್ನಲು ಏನಾದರೂ ಕೊಡುತ್ತೇನೆ. ನನಗೆ ನಿಮ್ಮ ಪರಿಚಯವಿಲ್ಲ” ಎಂದಳು.

“ನಾವು ಐಶ್ವರ್ಯ, ಯಶಸ್ಸು ಮತ್ತು ಪ್ರೀತಿ. ನಮ್ಮಲ್ಲಿ ಯಾರಾದರೂ ಒಬ್ಬಳನ್ನು ನೀವು ಆಯ್ಕೆ ಮಾಡಿ ಒಳಗೆ ಕರೆಯಬೇಕು. ಉಳಿದವರ ಆಗಮನ ನಿಮ್ಮ ನಿರ್ಧಾರವನ್ನು ಅವಲಂಬಿಸಿದೆ” – ಎಂದು ಯುವತಿಯವರು ಹೇಳಿದರು. ಮಹಿಳೆ ಒಳಗೆ ಹೋಗಿ ಕುಟುಂಬದ ಸದಸ್ಯರೊಂದಿಗೆ ಚರ್ಚಿಸಿದಳು. ಗಂಡ ಐಶ್ವರ್ಯವನ್ನು ಬಯಸಿದರೆ ಹೆಂಡತಿ ಯಶಸ್ಸನ್ನು ಇಷ್ಟಪಟ್ಟಳು. ವಿವೇಕವಂತಳಾದ ಸೊಸೆ “ಪ್ರೀತಿ ಇದ್ದರೆ ಮಾತ್ರ ಉಳಿದೆಲ್ಲವೂ ದೊರೆಯುತ್ತವೆ” – ಎಂದ ಕಾರಣ ಮಹಿಳೆ ಪ್ರೀತಿಯನ್ನು ಒಳಗೆ ಕರೆದಳು.

ಪ್ರೀತಿ ಮೇಲೆದ್ದು ಹೊಸ್ತಿಲಿ ದಾಟುತ್ತಿದ್ದಂತೆ ಐಶ್ವರ್ಯ ಮತ್ತು ಯಶಸ್ಸು ಆಕೆಯನ್ನು ಹಿಂಬಾಲಿಸಿದರು. “ಈಕೆಯೇ ನಮ್ಮೆಲ್ಲರ ನಾಯಕಿ. ಅವಳಿರುವಲ್ಲೇ ನಮ್ಮ ವಾಸ” ಎಂದರು.

************

**ಧಾರ್ಮಿಕ ಸತ್ಸಂಗಗಳಿಂದ ಸಾತ್ವಿಕರು, ಸದ್ಭಕ್ತರು ಇನ್ನಷ್ಟು ಉತ್ತೇಜಿತರಾಗುತ್ತಾರೆ. ಧರ್ಮ–ಸಂಸ್ಕೃತಿಯ ಅರಿವಿಲ್ಲದವರು ಇಂತಹ ವ್ಯವಸ್ಥೆಗಳಿಂದ ಸುಸಂಸ್ಕೃತರಾಗುವತ್ತ ಮನ ಮಾಡುತ್ತಾರೆ. ಒಟ್ಟಿನಲ್ಲಿ ಸದ್ವಿಚಾರ –ಸತ್ಸಂಗಗಳು ಸದಾ ನಡೆಯುತ್ತಿರಬೇಕು.**

**– ಒಡಿಯೂರು ಶ್ರೀ**





# ಸಮರ್ಥಗುರು ಸಮರ್ಥ ರಾಮದಾಸರು

● ಕೃಷ್ಣ ಭಟ್ ಪಿ.ಎಸ್.
ಶಾಂತಿ ಸದನ, ಪಂಜಾಜೆ, ಕನ್ಯಾನ

ನಮ್ಮೀ ದೇಶ ಭಾರತವು ಹಲವು ಪುಣ್ಯಪುರುಷರ ಪವಾಡ ದಿಗ್ಗಜರುಗಳ ಆಡುಂಬೊಲವಾಗಿದೆ. ಅಂತಹ ಮಹಾನ್ ವ್ಯಕ್ತಿಗಳಲ್ಲಿ ಮರ್ಯಾದಾ ಪುರುಷೋತ್ತಮ ಶ್ರಿ ರಾಮಚಂದಿರ ದೇವರು ಹಾಗೂ ಚಿರಂಜೀವಿಯಾದ ಹನುಮಾನ್‌ರು ಭಕ್ತವತ್ಸಲರಾಗಿದ್ದುಕೊಂಡು, ಹಲವರ ಕಾರ್ಯಸಾಧನೆಗಳಿಗೆ ಪ್ರೇರಕರಾಗಿದ್ದಾರೆಂದು ನಮ್ಮ ದೇಶದ ಚರಿತ್ರೆಯು ಸಾರಿ ಸಾರಿ ಹೇಳುತ್ತಿದೆ. ಅವರಲ್ಲಿ ಸಮರ್ಥ ಗುರುಗಳಾದ ರಾಮದಾಸ ಸ್ವಾಮೀ ಎಂಬವರು ಅಜರಾಮರರಾಗಿದ್ದಾರೆ. ಅವರ ಕಥೆಯು ಎಲ್ಲರಿಗೂ ಅನುಕರಿಸಲು ಹಿತಕರವಾಗಿದೆ.

ಭಗವಾನ್ ಶ್ರೀ ಸೂರ್ಯನಾರಾಯಣ ದೇವರ ವರಪ್ರಸಾದದಿಂದ ಸಾವಿರದ ಆರ್‍ನೂರ ಅರ್‍ವತ್ತೆರಡ(೧೬೦೮)ನೇ ಸಂವತ್ಸರದ ಮಾರ್ಗಶಿರ ತಿಂಗಳ ಶುಕ್ಲ ಪಕ್ಷದ ತ್ರಯೋದಶಿ ಅಂದರೆ ಹದಿಮೂರನೆಯ ದಿನ ಸೂರ್ಯಾಜಿ ಪಂತರ ಧರ್ಮಪತ್ನಿ ಶ್ರೀಮತಿ ರೇಣುಕಾ ಬಾಯಿಯವರು ತಮ್ಮ ಮೊದಲನೆಯ ಮಗನಿಗೆ ಜನ್ಮವಿತ್ತರು. ಆ ಬಾಲಕನಿಗೆ ಗಂಗಾಧರನೆಂದು ಹೆಸರಿಡಲಾಯಿತು.

ಗಂಗಾಧರನು ತನ್ನ ಒಂಭತ್ತನೇ ವರ್ಷ ಪ್ರಾಯದಲ್ಲಿ ಹನುಮಾನ್ ದೇವರ ಗುಡಿಯಲ್ಲಿ ಮಾರುತಿ ಕವಚದ ಪಾರಾಯಣ ಮಾಡಿ ಹನುಮಾನ್ ದೇವರನ್ನು ಪ್ರತ್ಯಕ್ಷೀಕರಿಸಿಕೊಂಡನು. ಚಿರಂಜೀವಿ ಹನುಮನ ಒಲವು ಸಿಕ್ಕಿದ ಆ ಹುಡುಗನಿಗೆ ಶ್ರೀ ರಾಮಚಂದಿರ ದೇವರ ಅನುಗ್ರಹ ಸಹ ದೊರೆತೇ ಬಿಟ್ಟಿತು. ಕೇವಲ ಹನ್ನೊಂದನೇ ದಿನಗಳಲ್ಲಿ ಹುಡುಗನಿಗೆ ಆ ಸಾಧನೆ ಲಭ್ಯವಾಗಿತ್ತೆಂದರೆ ಅದು ಒಂದು ಪವಾಡವಲ್ಲವೇ? ದೇವರ ದಯೆಯ ಆರಂಭದ ಪ್ರವಾಹವಲ್ಲವೇ!

ಅದೇ ಬಾಲಕ ಗಂಗಾಧರನು ಮುಂದೆ ಬೆಳೆದು “ರಾಮೀರಾಮದಾಸರೆಂಬ” ಹೆಸರಿನಿಂದ ಜಗತ್ತಿನ ಬೆಳಕಾಗಿ ಬೆಳಗಿದರು. ಆ ಹುಡುಗನ ನಂತರ ಮೂರೇ ವರುಷಗಳ ಅಂತರದಲ್ಲಿ ಅಂದರೆ ಸಾವಿರದ ಆರುನೂರ ಅರ್‍ವತ್ತೈದನೇ

ಸಂವತ್ಸರದ ಚೈತ್ರ ಮಾಸದ ಶುಕ್ಲಪಕ್ಷದ ನವಮಿಯ ದಿನ ಶ್ರೀಮತಿ ರೇಣುಕಾಬಾಯಿಯವರು ಮತ್ತೊಬ್ಬ ಗಂಡು ಮಗುವಿಗೆ ಜನ್ಮವಿತ್ತರು. ಅಂದು 'ರಾಮನವಮಿ' ಆಗಿತ್ತು.

ಅವನಿಗೆ ಅವನ ಪಿತಾಶ್ರೀಯವರು 'ನಾರಾಯಣ'ನೆಂದು ಹೆಸರಿಟ್ಟರು. ಆ ನಾರಾಯಣನೇ ಮುಂದೆ ಬೆಳೆದು ಸಮರ್ಥ ಗುರು ರಾಮದಾಸರಾಗಿ ಪ್ರಸಿದ್ಧಿ ಪಡೆದರು. ಅವರಿಗೆ ಐದು ವರ್ಷದ ಬಾಲಕನಾಗಿದ್ದಾಗ ಉಪನಯನ ಸಂಸ್ಕಾರ ಮಾಡಲಾಯಿತು. ಅವರು ಆ ಸಮಯದಲ್ಲಿ ಬಹಳ ತುಂಟರಾಗಿದ್ದರು. ಚಟುವಟಿಕೆಯಿಂದ ಕೂಡಿದವರಾಗಿದ್ದರು.

ಅವರು ಪ್ರತಿದಿನ ಮಂಗಗಳಂತೆ ಮರವೇರುತ್ತಿದ್ದರು, ಹಾರಾಟ-ಓಡಾಟ ನಡೆಸುತ್ತಿದ್ದರು. ಗುಡ್ಡ, ಬೆಟ್ಟಗಳಲ್ಲಿ ವೇಗವಾಗಿ ಓಡುವುದು, ಇಳಿಯುವುದು ಮೊದಲಾದ ಅಪಾಯಕಾರಿ ಆಟಗಳನ್ನು ಆಡುತ್ತಿದ್ದರು. ಅವುಗಳ ಜೊತೆಯಲ್ಲಿಯೇ ಓದು ಬರಹ, ಲೆಕ್ಕ (ಓಬಲೆ)ಗಳನ್ನೂ ಕರಗತ ಮಾಡಿ ಕೊಂಡಿದ್ದರು.

ಪ್ರತಿದಿನ ಬ್ರಹ್ಮಚಾರಿಯ ವಿಧಿ, ಕರ್ಮಗಳನ್ನು ಅರಿತುಕೊಂಡು ಅದರಂತೆ ನಡೆಯುತ್ತಿದ್ದರು. ಅಲ್ಲದೆ ದಿನಾಲೂ ಎರಡು ಸಾವಿರ ಸಲ, ಸೂರ್ಯ ನಮಸ್ಕಾರಗಳನ್ನು ಮಾಡುತ್ತಿದ್ದರು. ಅವರೂ ಸಹ ಅಣ್ಣನಂತೆಯೇ ತಮ್ಮ ಎಂಟನೇ ವರ್ಷ ಪ್ರಾಯದಲ್ಲಿಯೇ, ಹನುಮಾನ್ ದೇವರನ್ನು ಒಲಿಸಿಕೊಂಡರು, ಮಾತ್ರವಲ್ಲ ರಾಮಚಂದಿರ ದೇವರ ಅನುಗ್ರಹವನ್ನೂ ಪಡೆದರು. ಶ್ರೀರಾಮಚಂದಿರ ದೇವರೇ ಸ್ವತಃ ಕಾಣಿಸಿಕೊಂಡು, ಅವರ ಹೆಸರನ್ನು ರಾಮದಾಸರೆಂದು ಬದಲಾಯಿಸಿದರು.

ಅವರು ಹನ್ನೆರಡು ವರುಷಗಳ ಹರೆಯದವರಾದಾಗ, ಅವರಿಗೆ ಮದುವೆ ಮಾಡುವ ಸನ್ನಾಹ ನಡೆಯಿತು. ವಿವಾಹ ಮಂಟಪದಲ್ಲಿ ವಧು-ವರರನ್ನು ಎದುರು-ಬದುರಾಗಿ ನಿಲ್ಲಿಸಿ ಅವರ ಮಧ್ಯದಲ್ಲಿ ಪರದೆ ಹಿಡಿದು ನಿಂತಿದ್ದರು. ಬ್ರಾಹ್ಮಣರು "ಸುಮುಹೂರ್ತೇ ಸಾವಧಾನ್" ಎಂದು ಏರುಸ್ವರದಲ್ಲಿ ಹೇಳುತ್ತಿದ್ದಂತೆಯೇ, ಎಚ್ಚೆತ್ತ ರಾಮದಾಸರು ಮಂಟಪದಿಂದ ಹಾರಿ ಕಾಣೆಯಾದರು. ಹನ್ನೆರಡು ವರುಷಗಳ ತನಕ ಮನೆಯವರಿಗೆ ಕಾಣ ಸಿಗಲೇ ಇಲ್ಲ.

(.......**ಮುಂದುವರಿಯುವುದು**)





# ಶ್ರೀಮದ್ವಾಲ್ಮೀಕಿ ರಾಮಾಯಣಮ್ - ಸುಂದರ ಕಾಂಡ(ಗದ್ಯ)

● ತುಳು ಭಾಷಾನುವಾದ: ಶ್ರೀ ಮಲಾರ್ ಜಯರಾಮ ರೈ
'ಅಪ್ಪೆ ಇಲ್ಲ್' ಅಡ್ಕಗುತ್ತು, ಶಿರಿಯ

**(ಕರಿನ ಸಂಚಿಕೆಡ್.....)**

## ಎಣ್ಮನೇ ಸರ್ಗೊ

ಹನುಮಂತೆ ಕುಡೊರ ಪುಷ್ಪಕ ವಿಮಾನೊನು ತೂಯಿನೆ ರಾವಣನ ಮಹಾಸೌಧೊದ ಮಧ್ಯ ಭಾಗೊಡು ಆ ಪುಷ್ಪಕ ವಿಮಾನ ಇತ್ತ್ಂಡ್. ಮಣಿಕ್ಲು ರತ್ನೊಲೆನ್ ಕೋತುದು ಚಿತ್ರಿತವಾಯಿನ, ಪುಟೊಕು ಪಾಡ್ದಿ ಬಂಗಾರ್‍ದೇ ತಯಾರ್ ಮಲ್ತಿನ ಆ ಪುಷ್ಪಕ ವಿಮಾನೊನು ಕಪಿವೀರೆ ಹನುಮಂತೆ ತೂಯೆ. (೧)

ಈತೇ ಪೊರ್ಲುಂದು ಪಣಿಯೆರೆ ತೀರಂದಿ, ಎಣಿಕೆಗ್ ತಿಕ್ಕಂದಿ ಆ ಪೊರ್ಲಕಂಟ್ ಪುಷ್ಪಕ ವಿಮಾನೊ ಪೊರ್ಲು ಪೊಲಿಕೆದ ಪಾಪದಲೆಕೊ ತಯಾರಾದಿಂತ್ತ್ಂಡ್. ಲೋಕೊನೇ ಮೆಚ್ಚುನ, ಸಾಟಿ ಇಜ್ಜಂದಿ ಆ ಪುಷ್ಪಕ ವಿಮಾನೊನು ಸಾಕ್ಷಾತ್ ವಿಶ್ವಕರ್ಮೆನೇ ತಯಾರ್ ಮಲ್ತ್‌ದಿತ್ತೆ. ಬಾನೊಗು ರಾವುನ ವಾಯುಮಾರ್ಗೊಡೇ ಅವು ಪ್ರತಿಷ್ಠೆ ಆದಿತ್ತ್ಂಡ್. ನೆಲ ಬುಡ್ದು ಆಕಾಸೊಡಿತ್ತ್ಂಡ್. ಸೂರ್ಯನ ಸಾದಿಗ್ ಕೈಗಲ್ಲ್‌ದೆಲಕೊ ಇತ್ತಿ ಆ ದಿವ್ಯ ವಿಮಾನೊನು ಹನುಮಂತೆ ತೂಯೆ. (೨)

ಪ್ರಯತ್ನ ಪೂರ್ವಕ ಮಲ್ಪಂದಿನ ವಾ ಭಾಗೊಲಾ ಆ ವಿಮಾನೊಡಿ-ತ್ತಿಜಿ. ಬಹು ಬಿಲೆತ ರತ್ನೊಲು ಇಜ್ಜಂದಿ ಭಾಗೊಲಾ ಐಟತ್ತಿಜಿ. ಅತ್ಯಂತ ವಿಶಿಷ್ಟವಾಯಿನ ರಚನೆ ಇಜ್ಜಂದಿ ವಾ ಭಾಗೊಲಾ ಆ ವಿಮಾನೊಡಿತ್ತಿಜಿ. ಐತ ಮಾತ ಭಾಗೊಲುಲಾ ವಿಶಿಷ್ಟ ಶಿಲ್ಪ ಚಾತುರ್ಯೊಡು ಮಲ್ತಿನವೇ ಆದಿತ್ತೊ. ದೇವತೆಲೆಡಲಾ ಅಂಚಿತ್ತಿ ವಿಶಿಷ್ಟ ರೀತಿಡ್ ನಿರ್ಮಿತಿ ವಿಮಾನೊಲಿತ್ತ್‌ಜಿ. (೩)

ತಪಸ್ಸ್‌ಡ್ಲಾ, ಪರಾಕ್ರಮೊಡ್ಲಾ ರಾವಣೆ ಆ ವಿಮಾನೊನು ಸಂಪಾದನೆ ಮಲ್ತ್‌ದಿತ್ತೆ. ಐಟ್ ಕುಲ್ಲಿ ಪ್ರಯಾಣಿಕೆರ್ ಸಂಕಲ್ಪ ಮಲ್ತಿ ಜಾಗೆಗ್ ಆ ವಿಮಾನ ರಾವೊಂದು ಪೋವು.

ನಾನಾ ರೀತಿದ ವಿಲಕ್ಷಣ ಸಭಾಗೃಹೊಕ್ಲು, ಗೊಬ್ಬುದ ಕಲ ತೋಟೊಲು, ಅಡ್ಡಿಲ್ಲುಲು, ಕುಸಾಲ್ದ ಮಾಡೊಲು, ಗೋಪುರೊಲು ಇತ್ಯಾದಿ ಸೌಕರ್ಯೊಲು

ಆ ವಿಮಾನೊಡಿತ್ತೊ. ಅತಿ ಸೂಕ್ಷ್ಮವಾಯಿನ ಚಿತ್ರಕಲೆ, ಬಣ್ಣೊಲೆಡ್ದಾದ್ ತೂವರೆ ಯೋಗ್ಯವಾದಿತ್ತ್ಂಡ್. ಅಂಚಿತ್ತಿ ವಿಮಾನ ಬೇತೆ ಓಲುಲಾ ಇಜ್ಜಾಂಡ್. (೪)

ಆ ವಿಮಾನೊ ಐತ ಎಜಮಾನ್ಯನ ಮನಸ್‌ದಂಚನೇ ಅತಿ ಶೀಘ್ರೊಡು ವಾ ಜಾಗೆಗ್ ಪೋವೊಡಾ ಅಡೇ ಪೋವು. ಐತ ಗತಿನ್ ಏರೆಗ್ಲಾ ತಡೆಯೆರೆ ತೀರಂದ್. ಆ ವಿಮಾನ ವಾಯು ವೇಗೊಡು ರಾವು.

ಮಹಾತ್ಮೆರ್, ಪುಣ್ಯಾತ್ಮೆರ್, ತೇಜಸ್ಸಂಪನ್ನೆರ್ ಬೊಕ್ಕ ಸುಪ್ರಸಿದ್ಧೆರೆ ಅರಮನೆಕ್ಲೆಲೆಕೊ ಇಂದ್ರನೆ ದುಂಬಾಯಿ ದೇವತೆಲೆ ಸ್ವರ್ಗದಲೆಕೊ ಆ ವಿಮಾನೊ ಸಂತೊಸೊ ಕೊರೊಂದಿತ್ತ್ಂಡ್. (೫)

ಆಕಾಶ ಗಮನ ಇತ್ಯಾದಿ ವಿಶೇಷ ಗುಣೊಕ್ಲಿತ್ತಿ ಆ ವಿಮಾನ ವಾಯು ಮಾರ್ಗೊಡು ಸ್ಥಾಪನೆ ಆದಿತ್ತ್ಂಡ್. ಚಿತ್ರ, ವಿಚಿತ್ರವಾಯಿನ ಪಾಕ ಶಿಖರೊಲೆಡ್ದ್ ಸಿಂಗಾರ ಆತಿ ಆ ವಿಮಾನೊ ಶರತ್ಕಾಲೊದ ಚಂದ್ರಲೆಕೊ ನಿರ್ಮಲವಾದ್ ಮನಸ್‌ಗ್ ಮುದ ಕೊರೊಂದಿತ್ತ್ಂಡ್.

ಪಾಕ ಎಲ್ಯೆಲ್ಯ ಶಿಖರೊಲೆಡ್ದ್ ಕೂಡ್ದಿ ಮಲ್ಲೊಂಜಿ ಪರ್ವತ ಶಿಖರೊದ ಲೆಕೊ ಇತ್ತಿ ಆ ಪುಷ್ಪಕ ವಿಮಾನೊನು ಹನುಮಂತೆ ತೂಯೆ. (೬)

ಕೆಬಿಟ್ ಕುಂಡಲೊಲು ದೀಡ್ದ್ ಶೋಭೆಡುಪ್ಪಿ ಮೋನೆದ ಮಾಮಲ್ಲ ಕಾಯೊದ, ಆಕಾಸೊಡು ಸಂಚಾರ ಮಲ್ಪುನ, ತನ್ನ ಎಜಮಾನ್ಯಗ್ ನಿಷ್ಠೆಡುಪ್ಪುನ ಮಲ್ಲ ಕಣ್ಣ್‌ದ ಅತಿ ವೇಗೊಡು ಸಂಚಾರ ಮಲ್ಪಿ ಸಾಮರ್ಥಯದ ಸಾರ, ಸಾರ ಭೂತಗಣೊಕ್ಲು ಆ ವಿಮಾನೊನು ದೆರ್ತೊಂದಿಲೆಕೊ ವಿಮಾನದ ಪಿದಾಯಿಡ್ದ್ ಶಿಲ್ಪ ಕೆತ್ತನೆಲು ಇತ್ತೊ.

ಸ್ವೇಚ್ಛೆಡ್ ನೆನೆತಿ ಜಾಗೆಗ್ ಪೋಪಿ ಸಾಮರ್ಥ್ಯದ ಆ ವಿಮಾನೊಗು ದೆರ್ತೊಂದು ಪೋಪಿನಕ್ಲು ಬೊಡ್ಚಿತ್ತ್‌ನೆಡ್ದ್, ಅಕ್ಲು ಕೇವಲ ಪಾಪೆಲೆ ರೂಪೊಡು ವಿಮಾನೊಡಿತ್ತೆರ್. (೭)

ವಸಂತ ಕಾಲೊಡು ಪೊರ್ಲು ಪೊಲಿಕೆಡ್ ತೋಜ್‌ಬಿ ಪೂಕ್ಲೆ ಗೊಂಚಿಲ್‌ದಲೆಕೊ ಪೊರ್ಲುದ ವಸಂತ ತಿಂಗೊಲುಡ್ದ್‌ಲಾ ಪೊರ್ಲಾಯಿನ ಉತ್ತಮೋತ್ತಮ ಪುಷ್ಪಕ ವಿಮಾನೊನು ಹನುಮಂತೆ ತೂಯೆ. (೮)





## ಒಂರ್ಬನೇ ಸರ್ಗೊ

ರಾವಣನ ಅಂತಃಪುರೊಟು ಜೆತ್ತ್‌ದಿತ್ತಿ ಪೊಂಜೊವೆನ್ ಹನುಮಂತೆ ತೂಯಿನೆ. ವಾಯುಕುಮಾರೆ ಹನುಮಂತೆ, ಶ್ರೇಷ್ಠವಾಯಿನ ಇಲ್ಲ್‌ಲು ದಿಂಜಿದಿತ್ತಿ ಲಂಕಾ ನಗರಿದ ಮಧ್ಯೊಡು ಎಡ್ಡೆಡ್ ಎಡ್ಡೆಂತಿನ ರಾಜಭವನೊನು ತೂಯೆ. (೧)

ರಾವಣನ ಆ ಮಾಮಲ್ಲ ಅರಮನೆಟ್ ಅನೇಕ ಪ್ರಾಸಾದೊಲಿತ್ತೊ. ಆ ಅರಮನೆ ಅರ್ಧ ಯೋಜನ ಅಗೆಲ ಒಂಜಿ ಯೋಜನ ಉದ್ದೊ ವಿಸ್ತಾರೊಡಿತ್ತ್ಂಡ್. (೨)

ವಿಶಾಲನೇತ್ರೆ ವೈದೇಹಿನ್ ನಾಡೊಂದು ಶತ್ರು ಸಂಹಾರಕೆ, ಸಮರ್ಥ ಮಾರುತಿ ಅವುಲಿತ್ತಿ ಮಾತ ಇಲ್ಲ್‌ಲೆಡ್ ಒಂಜೆಲ್ಲಾ ಬುಡಂದೆ ಸೀತೆನ್ ನಾಡ್ಯೆ. (೩)

ಸರ್ವ ಶುಭಲಕ್ಷಣೊಲಿತ್ತಿ ಹನುಮಂತೆ ಸುತ್ತುಮುತ್ತ್‌ದ ಮಾತ ಇಲ್ಲ್‌ಲೆನ್ ತೂದು ಶ್ರೇಷ್ಠವಾಯಿನ ರಾವಣ ಭವನೊಗು ಬತ್ತ್‌ದ್ ಎತ್ಯೆ. (೪)ಆ ವಿಶಾಲ ಅರಮನೆತ ಸುತ್ತ ಒಂಜಿ, ರಡ್ಡ್, ಮೂಜಿ ನಾಲ್ ದಾಡೆಲಿತ್ತಿ ಮದ ಏರ್ದಿ ಆನೆಲು ಇತ್ತೊ.

ಆಯುಧೊಲೆನ್ ದೆರ್ತ್ ಪತ್ತ್‌ದ್ ಸದಾ ಎಚ್ಚರೊಡು ತಯಾರಾದಿತ್ತಿ ರಕ್ಕಸೆರ್ ಅರಮನೆತ ಕಾವೆಲ್‌ಗಿತ್ತೆರ್. (೫)

ಆ ಮಹಾ ಪ್ರಾಸಾದೊಡು ರಾವಣನ ಬೊಡಿದಿಲಾಯಿನ ರಾಕ್ಷಸ ಸ್ತ್ರೀಯೆರ್ಲಾ ಆಯೆ ಪರಾಕ್ರಮೊಡು ಗೆಲ್ತ್‌ದ್ ಕೊನತಿ ರಾಜಕುಮಾರಿಯೆರ್ಲಾ ದಿಂಜಿದಿತ್ತೆರ್. (೬)

ಮುದಲೆ, ಮೀನ್, ತಿಮಿಂಗಿಲೊಲು, ಮಲ್ಲ, ಮಲ್ಲ ನೀರ ಮುರ್ಗೊಲು ದಿಂಜಿದ್, ಗಾಳಿದ ರಬಸೊಗು ಅಡಿಮೇಲಾದ್ ಅಕಾಸೊಗು ಮುಟ್ಟುದಿ ನೀರತೆರೆಕ್ಲೆಡ್ದ್ ಕೂಡ್ದಿತ್ತಿ ಸಮುದ್ರದಲೆಕೊ ಆ ಅರಮನೆತ ಗೌಜಿ ತೋಜೊಂದಿತ್ತ್ಂಡ್. **(...ದುಂಬರಿಪುಂಡು)**

---

**“ಉತ್ತಮ ಸಂಸ್ಕಾರ, ಸಹಕಾರ, ಸಂಘಟನೆಯ ಮೂಲಕ ಸಮೃದ್ಧಿಯನ್ನು ಹೊಂದುವುದರಿಂದ ಧರ್ಮದ ರಕ್ಷಣೆಯಾಗುತ್ತದೆ. ಅದು ಆಚಾರ–ವಿಚಾರದ ಮೂಲಕ, ದಾನ–ಪರೋಪಕಾರದ ಮೂಲಕ, ಪ್ರೀತಿ–ವಿಶ್ವಾಸದ ಮೂಲಕ ಪಸರಿಸಿ ಎಲ್ಲರ ಹೃದಯವನ್ನು ಗೆಲ್ಲುವುದು.”**

**– ಒಡಿಯೂರು ಶ್ರೀ**

# ಆಹಾರ ನಿಯಮ

● ವೇ॥ಬ್ರ॥ಶ್ರೀ॥ಪ್ರೊ॥ ಕೆ. ಕೇಶವಮೂರ್ತಿ, ಎಂ.ಎಸ್ಸಿ, ಎಂ.ಇಡಿ
ವಿಶ್ರಾಂತ ಪ್ರಾಚಾರ್ಯರು, ಮೈಸೂರು

**(ಹಿಂದಿನ ಸಂಚಿಕೆಯಿಂದ..)**

## 8. ಆಹಾರ ಪ್ರಮಾಣ:

ತನಗೆಷ್ಟು ಆಹಾರ ಬೇಕೆಂಬುದನ್ನು ತಾನೇ ನಿರ್ಧರಿಸಿಕೊಳ್ಳಬೇಕು. ಇದಕ್ಕೆ ಕಾರಣ 'ಆತ್ಮಬುದ್ಧಿ ಸುಖಂ ಚೈವ' – ಎಂಬ ಮಾತೊಂದಿದೆ. ಅದಿರಲಿ ಈಗ ನಾವು ಆಧುನಿಕ ವಿಜ್ಞಾನಕ್ಕೆ ಬರೋಣ. ವೈದ್ಯಾ ವಿಜ್ಞಾನದಂತೆ ಇಂತಿಷ್ಟು ಕ್ಯಾಲೋರಿಗಳು ಎಂದು ನಿರ್ಧರಿಸಿದ್ದಾರೆ. ಯಾವ ಯಾವ ವಯೋಧರ್ಮದವರಿಗೆ ಎಷ್ಟೆಷ್ಟು ಕ್ಯಾಲೋರಿಗಳು ಎಂಬುದನ್ನು ತಿಳಿಸಿದೆ. 1. ಮಕ್ಕಳು 0–12ತಿಂಗಳು 100–200 ಕ್ಯಾಲೋರಿ, 1–6ವರ್ಷ 1200–1800 ಕ್ಯಾಲೋರಿ, 7–12ವರ್ಷ 1800–2000ಕ್ಯಾಲೋರಿ 2. ಹದಿಹರೆಯದವರು ಪುರುಷರು 13–15ವರ್ಷದವರು 2500ಕ್ಯಾಲೋರಿ, ಹುಡುಗಿಯರು 2200 ಕ್ಯಾಲೋರಿ 3. ದೊಡ್ಡವರು: ಗಂಡಸರು 16ವರ್ಷ ಮೇಲ್ಪಟ್ಟವರು ಕುಳಿತು ಕಾರ್ಯ ನಿರ್ವಹಿಸುವವರು 2600 ಕ್ಯಾಲೋರಿ, ಸಾಧಾರಣ ದೈಹಿಕ ಸಾಮಥ–ರ್ಯದಿಂದ ಕಾರ್ಯ ಮಾಡುವವರು 2800 ಕ್ಯಾಲೋರಿ, ಕಷ್ಟಕರವಾದ ದೈಹಿಕ ಕಾರ್ಯದವರಿಗೆ 4000 ಕ್ಯಾಲೋರಿ. ಹೆಂಗಸರು: ಸಾಮಾನ್ಯ ಚಟುವಟಿಕೆಯಿಂದ ಕೂಡಿದ ಗೃಹಿಣಿಯರಿಗೆ 2400 ಕ್ಯಾಲೋರಿ ಆಹಾರ ಬೇಕು.

ಈ ಮೇಲಿನ ಅಂಶಗಳು ವ್ಯಕ್ತಿಯ ಎತ್ತರ, ತೂಕ, ವಯಸ್ಸು ಇತ್ಯಾದಿಗಳಿಂದಲೂ ಸ್ವಲ್ಪ ಏರು ಪೇರಾಗುತ್ತದೆ. ಈಗ ನಾವು ಸೇವಿಸುವ ಆಹಾರಗಳಿಂದ ಎಷ್ಟೆಷ್ಟು ಕ್ಯಾಲೋರಿಗಳು ದೊರೆಯುತ್ತವೆಂಬುದನ್ನು ನೋಡೋಣ. ನೀರನ್ನು ಹೊರತುಪಡಿಸಿ ನಾವು ತಿಂದ ಕಾರ್ಬೋಹೈಡ್ರೇಟ್ ಮತ್ತು ಪ್ರೋಟೀನ್‌ಗಳ ಒಂದು ಗ್ರಾಂನಿಂದ 4 ಕ್ಯಾಲೋರಿ ದೊರೆಯುತ್ತದೆ. ಕೊಬ್ಬಿನ ಆಹಾರ ಪದಾರ್ಥಗಳಿಂದ 1 ಗ್ರಾಂಗೆ 9ಕ್ಯಾಲೋರಿ, ಪಾನೀಯಗಳಿಂದ 1ಗ್ರಾಂನಿಂದ 7 ಕ್ಯಾಲೋರಿ ಸಾಮಾನ್ಯವಾಗಿ ಕರಿದ ಪದಾರ್ಥ, ಸಿಹಿ ತಿಂಡಿಗಳಲ್ಲಿ ಹೆಚ್ಚು ಕ್ಯಾಲೋರಿಗಳಿರುತ್ತದೆ. ಮಜ್ಜಿಗೆ, ತಿಳಿಸಾರು, ಹೊಸ ತರಕಾರಿಗಳಲ್ಲಿ ಕಡಿಮೆ ಕ್ಯಾಲೋರಿಗಳಿರುತ್ತವೆ. ಮೆಣಸು ಮತ್ತು ಉಪ್ಪನ್ನು ಸಿಂಪಡಿಸಿದ ತಿಂಡಿ–ತಿನಸುಗಳಲ್ಲಿ ಕಡಿಮೆ ಕ್ಯಾಲೋರಿಗಳಿರುತ್ತದೆ.





ಈಗ ಯಾವ ಯಾವ ಆಹಾರದಲ್ಲಿ ಎಷ್ಟೆಷ್ಟು ಕ್ಯಾಲೋರಿಗಳಿವೆ ಎಂಬುದನ್ನು ನೋಡೋಣ.

ಕೋಸು, ದಪ್ಪ ಮೆಣಸಿನಕಾಯಿ, ಅಣಬೆ, ಈರುಳ್ಳಿ, ಹುರಳಿಕಾಯಿ, ಸೌತೆಕಾಯಿ, ಬದನೆಕಾಯಿ, ಟೊಮಾಟೊ, ಮೂಲಂಗಿ, ಹಸಿಸೊಪ್ಪು, ಬೆಂಡೆಕಾಯಿ ಇವುಗಳಲ್ಲಿ 100ಗ್ರಾಂಗೆ ಸರಾಸರಿ 25–30 ಕ್ಯಾಲೋರಿ ಇರುತ್ತದೆ. ಆದ್ದರಿಂದ ಇವುಗಳನ್ನು ಧಾರಾಳವಾಗಿ ತಿನ್ನಬಹುದು.

ಬಟಾಣಿ, ಬೀಟ್‌ರೋಟ್, ಆಲೂಗಡ್ಡೆ, ಗೆಡ್ಡೆಗೆಣಸು ಇವುಗಳಲ್ಲಿ 100ಗ್ರಾಂಗೆ 100–120 ಕ್ಯಾಲೋರಿ ಇರುತ್ತಾದ್ದರಿಂದ ಇವುಗಳನ್ನು ಮಿತವಾಗಿ ಬಳಸಬೇಕು. ಸ್ಥೂಲಕಾಯದವರಿಗೆ ಆಹಾರದ ಮಾದರಿ ಪಟ್ಟಿ.

ಸ್ಥೂಲಕಾಯವನ್ನು ನಿರ್ಧರಿಸುವುದು ಹೇಗೆ? ಇಂತಿಷ್ಟು ಎತ್ತರಕ್ಕೆ ಇಂತಿಷ್ಟು ತೂಕವಿರಬೇಕೆಂದು ವೈದ್ಯಕೀಯ ವಿಜ್ಞಾನವು ನಿರ್ಧರಿಸಿದೆ. ಇದು ಸ್ತ್ರೀ–ಪುರುಷ–ರಿಗೆ ಬೇರೆ ಬೇರೆಯಾಗಿಯೇ ಇರುತ್ತದೆ. ಹಾಗೆ ನಮೂದಿಸಿರುವ ತೂಕಕ್ಕಿಂತ ಐದು ಕೆ.ಜಿ. ತೂಕ ಹೆಚ್ಚಾಗಿದ್ದರೆ ಅವರು ಸ್ಥೂಲಕಾಯರೆಂತಲೂ 27 ಕಿಲೋ. ಗ್ರಾಂ ಹೆಚ್ಚಾಗಿರುವವರು ಬೊಜ್ಜು ಮೈಯವರೆಂತಲೂ ತೀಮಾನಿಸಬಹುದು. ಇವೆಲ್ಲವೂ ಸತತ ಯೋಗಾಭ್ಯಾಸದಿಂದ ನಿವಾರಣೆಯಾಗುತ್ತದೆ.

ರೋಗಗಳೇ ಬಾರದೇ ಇರಬೇಕಾದರೆ ಹೀಗೆ ಮಾಡಬೇಕಂತೆ.

ಭೋಜನಾಂತೇ ಪಿಬೇತ್ತಕ್ರಂ ವಾಸರಾಂತೇ ಪಯಃ ಪಿಬೇತ್ ।
ನಿಶಾಂತೇ ಚ ಪಿಬೇದ್ವಾರಿಃ ತ್ರಿಭೀರೋಗೇ ನ ಜಾಯತೇ ॥

ಊಟವಾದ ಮೇಲೆ ಮಜ್ಜಿಗೆ ಕುಡಿಯುವುದು, ರಾತ್ರಿ ಹಾಲು ಕುಡಿಯುವುದು, ಬೆಳಗಿನ ಜಾವ ನೀರು ಕುಡಿಯುವುದರಿಂದ ರೋಗಗಳಿಂದ ಮುಕ್ತರಾಗಬಹುದೆಂದು ಆಯುರ್ವೇದ ಹೇಳುತ್ತದೆ.

**ಆಹಾರವನ್ನು ದಿನಕ್ಕೆ ಎಷ್ಟು ಬಾರಿ ಸೇವಿಸಬೇಕು?**

ಏಕಭುಕ್ತಂ ಮಹಾಯೋಗಿ ದ್ವಿಭುಕ್ತಂ ಚ ಮಹಾಭೋಗಿ ।
ತ್ರಿಭುಕ್ತಂ ಚ ಮಹಾರೋಗಿ ಚತುರ್ಭುಕ್ತಂ ನ ಜೀವತೇ ॥

ಒಂದೊತ್ತುಂಡವ ಯೋಗಿ ಎರಡ್ಹೊತ್ತುಂಡವ ಭೋಗಿ
ಮೂರ್ಹೊತ್ತುಂಡವ ರೋಗಿ ನಾಲ್ಕೊತ್ತುಂಡವನ್ಹೊತ್ಕೊಂಡೋಗಿ ।

ಇದು ಜನಪದರ ವಾಣಿ ಒಮ್ಮೆ ಉಂಡು ಬದುಕಿರಲು ಸಾಧ್ಯವೇ? ಎಂಬ ಸಂಶಯ ನಿಮಗೆ ಬರಬಹುದು. ನಮ್ಮ ಪ್ರಾಚೀನ ಋಷಿಮುನಿಗಳು ಒಮ್ಮೆಯೇ

ಉಣ್ಣುತ್ತಿದ್ದುದರಿಂದಲೇ ಅವರು ಮಹಾಯೋಗಿಗಳಾಗಿದ್ದರು.

‘ತಾಯಿ ಮಾಡಿದ ಹೊಟ್ಟೆ ಊರು ಮಾಡಿದ ಕೊಳಗ’

ಎಂಬ ಜನಪದ ಗಾದೆ ಇದಕ್ಕೆ ಸಾಕ್ಷಿ. ನಾವು ಮೂರು ಹೊತ್ತಿನ ಆಹಾರ ಸೇವನೆಗೆ ಒಗ್ಗಿ ಹೋಗಿದ್ದೀವಿ. ಆದ್ದರಿಂದ ಒಂದು ಬಾರಿ ಊಟದಿಂದ ಬದುಕಿರಲು ಸಾಧ್ಯವಿಲ್ಲವೆಂದುಕೊಂಡಿದ್ದೇವೆ.

‘ಸ್ವಾದ್ವನ್ನಂ ನ ತು ಯಾಚ್ಯತಾಮ್ ।’ ಎಂಬುದು ಶಂಕರ ಭಗವತ್ಪಾದರ ವಾಣಿ. ಅಂದರೆ ರುಚಿಕರವಾದ ಭೋಜನವನ್ನು ಅಪೇಕ್ಷಿಸಬಾರದಂತೆ. ನಾವು ಬದುಕಲು ತಿನ್ನಬೇಕೆ ವಿನಾ ತಿನ್ನುವುದಕ್ಕಾಗಿ ಬದುಕಬಾರದು. ಸ್ವಾಸ್ಥ್ಯ ಸಾಧನೆಯ ಸೂತ್ರವೊಂದು ಹಿಗಿದೆ.

ಜೀರ್ಣೇ ಹಿತಂ ಮಿತಂ ಚಾದ್ಯಾನ್ನ ವೇಗಾನ್ ಈರಯೇಲ್ಬಲಾತ್ ।
ನ ವೇಗಿತೋ ಅನ್ಯಕಾರ್ಯಃಸ್ಯಾತ್ ಅಜಿತ್ವಾಸಾಧ್ಯಮನಾಮಯಮ್ ॥

ಒಮ್ಮೆ ಊಟ ಮಾಡಿ ಅದು ಜೀರ್ಣವಾದ ಮೇಲೆಯೇ ಹಿತಾಹಾರವನ್ನು ಮಿತವಾಗಿ ಸೇವಿಸಬೇಕು. ಕಾರಣ ಅಜೀರ್ಣೇ ಭೋಜನಂ ವಿಷಮ್ । ಜೀರ್ಣವಾಗದೆ ಊಟ ಮಾಡಿದರೆ ಅದು ವಿಷಮಯವಾಗುತ್ತದೆ. ಆದ್ದರಿಂದಲೇ ಮಹಾಭಾರತವು “ಜೀರ್ಣಮನ್ನಂ ಪ್ರಶಂಸಂತಿ ।” ಎಂದು ಹೇಳಿದೆ.

**ಕಡೆಯ ಮಾತು:**

ಆಹಾರತುಲ್ಯಂ ಖಲು ರಕ್ತಮಸ್ತಿ ರಕತಾನುಸಾರಂ ವ್ಯವಹಾರಮಸ್ತಿ ।
ಆರೋಗ್ಯತುಲ್ಯಂ ಹಿ ಮನೋಬಲಂ ವೈ ಸಂಗಾನುಸಾರಂ ನರಕರ್ಮ ನಿತ್ಯಮ್ ॥

ಆಹಾರಕ್ಕನುಸಾರವಾಗಿ ರಕ್ತ ನಮ್ಮ ದೇಹದಲ್ಲಿ ಸಿದ್ಧವಾಗುತ್ತದೆ. ಅರ್ಥಾತ್ ಕ್ರೂರಾಹಾರದಿಂದ ಕ್ರೂರಿಯೂ ಸಾತ್ವಿಕಾಹಾರದಿಂದ ಸಾತ್ವಿಕನೂ ಆಗುತ್ತಾನೆ. ಆ ರಕ್ತಕ್ಕನುಸಾರವಾಗಿ ಮಾನವನ ನಡತೆ, ವ್ಯವಹಾರವಿರುತ್ತದೆ. ಮಾನವನ ಬಲವು ಅಂದರೆ ದೇಹಬಲ ಮತ್ತು ಮನೋಬಲಗಳೆರಡೂ ಅವನ ಆರೋಗ್ಯವನ್ನು ಅನುಸರಿಸುತ್ತದೆ. ಅದರಂತೆ ಅವನ ಕಾರ್ಯವೈಖರಿಗಳು ಅವನ ಸಹವಾಸವನ್ನು ಅವಲಂಬಿಸುತ್ತದೆ.

ಒಟ್ಟಿನಲ್ಲಿ ಯೋಗಾಭ್ಯಾಸಿಯು ಆಹಾರದ ವಿಷಯದಲ್ಲಿ ಹಿಂದೆ ಹೇಳಿದ ಎಲ್ಲವನ್ನೂ ತಪ್ಪದೆ ಅನುಸರಿಸಿದ್ದಲ್ಲಿ ಅವನ ಯೋಗಾಭ್ಯಾಸ ಅನಿರ್ಬಾಧಿತವಾಗಿ ಸಾಗಿ ಅವನ ಸಂಕಲ್ಪ ಈಡೇರುತ್ತದೆ.

**॥ ಹರಿಃ ಓಂ ತತ್ಸತ್ ॥**





# ಗುರುಕೃಪೆಯಿಂದ ಚತುರ್ಧಾಮ ದರ್ಶನ

● ಪ್ರೊ. ಎಂ. ಚಂದ್ರಪ್ರಭಾ ಆರ್. ಹೆಗ್ಡೆ
ಶಿರ್ವ

**(ಹಿಂದಿನ ಸಂಚಿಕೆಯಿಂದ...)**

ತಮ್ಮ ಆಶೀರ್ವಚನದಲ್ಲಿ ಗುರುಶಿಷ್ಯರ ಸಂಬಂಧದ ಕುರಿತು ಒಂದು ಪ್ರಸಂಗವನ್ನು ಹೀಗೆ ನಿರೂಪಿಸಿದರು. ಗುರುಕುಲದಲ್ಲಿ ಸೇರಿದ ಶಿಷ್ಯರೆಲ್ಲರ ಮುಂದೆ ಗುರು ವೇದಧರ್ಮಕೇಳಿದ. ನಿಮ್ಮ ಅಧ್ಯಯನದ ಬಗ್ಗೆ ನನಗೆ ಮೆಚ್ಚುಗೆ ಇದೆ. ಈಗ ಗುರುಸೇವೆಗೆ ನಿಮ್ಮಲ್ಲಿ ಯಾರು ಸಿದ್ಧರಿದ್ದೀರಿ? ಎಂದು ಗುರುಗಳು ಪ್ರಶ್ನಿಸಿದಾಗ ಒಬ್ಬ ಬಾಲಕ ಮುಂದೆ ಬಂದು ನಾನು ತಯಾರಿದ್ದೇನೆ ಎಂದ. ಆಗ ಗುರುಗಳು ಸೇವೆಯ ದಾರಿ ಬಹಳ ಕಠಿಣ ಇದೆ. ಎಂತಹ ಸಂದರ್ಭ ಬಂದರೂ ನೀನು ವಿಚಲಿತನಾಗದೆ ಸೇವೆ ಮಾಡಬಲ್ಲೆಯಾ? ಎಂದು ಕೇಳಿದರು. ದೃಢ ಮನಸ್ಕನಾದ ಆ ಬಾಲಕ ತಾನು ಸಿದ್ಧ ಎಂದವನೇ ಗುರುವಿನ ಸೇವೆ ಮಾಡಲು ಪ್ರಾರಂಭಿಸಿದ. ಗುರುಗಳಿಗೆ ಪೂರಕವಾದ ಎಲ್ಲ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದ. ಹೀಗೆ ದಿನ ಕಳೆಯುತ್ತಿರಲು ಗುರುಗಳಿಗೆ ವಿಪರೀತ ಚರ್ಮದ ಕಾಯಿಲೆ ಪ್ರಾರಂಭವಾಯಿತು. ಇಡೀ ದೇಹದಲ್ಲಿ ಮೂಡಿದ ಹುಣ್ಣುಗಳಿಂದಾಗಿ ಅಸಹನೀಯವಾದ ನೋವು ಉಂಟಾಯಿತು. ಈ ಬಾಲಕ ಶಿಷ್ಯ ಕಿಂಚಿತ್ತೂ ಹೇಸದೆ ನಿರಂತರ ಗುರುಗಳ ಸೇವೆ ಮಾಡುತ್ತಿದ್ದ. ಗುರುಗಳಾಗಿ ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿ ಆಹಾರವನ್ನು ತಂದುಕೊಡುತ್ತಿದ್ದ. ಗುರುಗಳು ಆತನನ್ನು ಪುರಸ್ಕರಿಸುವ ಬದಲು ಆಹಾರವನ್ನು ಸ್ವೀಕರಿಸದೆ ಬಿಸಾಡುವ ಮೂಲಕ ಆತನನ್ನು ತಿರಸ್ಕರಿಸಿ ನೋಯಿಸುತ್ತಿದ್ದರು. ಆದರೂ ಬೇಸರಿಸದೆ ಭಕ್ತಿಯಿಂದ ತನ್ನ ಗುರುಸೇವೆಯನ್ನು ಮುಂದುವರಿಸಿದ. ಆತನ ಗುರುಭಕ್ತಿಗೆ ಮೆಚ್ಚಿ ಶಿವ ಪ್ರತ್ಯಕ್ಷನಾಗಿ, ಮಗೂ ನಿನಗೇನು ವರಬೇಕು? ಕೇಳು ಎನ್ನಲು, ಬಾಲಕ ನನಗೇನೂ ಬೇಡ, ನಾನು ಗುರುವಿನ ಪಾದಸೇವೆಯಲ್ಲಿ ಸಂತೃಪ್ತನಾಗಿದ್ದೇನೆ ಎಂದ. ಮಹಾವಿಷ್ಣು ಪ್ರತ್ಯಕ್ಷನಾಗಿ ಮಗೂ ನಿನಗೇನು ವರ ಬೇಕು ? ಕೇಳು ಎಂದಾಗ ಬಾಲಕ ನನಗೇನೂ ಬೇಡ. ಗುರುಸೇವೆಯನ್ನು ಪ್ರೀತಿಯಿಂದ ಮಾಡುವ ಶಕ್ತಿ ಕೊಡು ಎಂದ. ಮಹಾವಿಷ್ಣು ತಥಾಸ್ತು ಎಂದು ಬಾಲಕನನ್ನು ಆಶೀರ್ವದಿಸಿ ಅಂತರ್ಧಾನನಾದ. ಆಶ್ರಮಕ್ಕೆ ಹಿಂತಿರುಗಿದ ಶಿಷ್ಯ ತನ್ನ ಗುರುವಿನೊಡನೆ ನಡೆದ ಸಂಗತಿಗಳನ್ನೆಲ್ಲ ವಿವರಿಸಿದ. ಗುರುಗಳು ಹರಿ–

ಹರ ದೇವರುಗಳೇ ನಿನ್ನ ಮುಂದೆ ಪ್ರತ್ಯಕ್ಷರಾಗಿ ನಿನ್ನನ್ನು ಅನುಗ್ರಹಿಸಿದಾಗ, ನನ್ನ ಕಾಯಿಲೆ ಗುಣ ಮಾಡು ಎಂದು ನೀನು ಯಾಕೆ ಕೇಳಲಿಲ್ಲ? ಎಂದು ಪ್ರಶ್ನಿಸಿದಾಗ ಇಲ್ಲ ಗುರುಗಳೇ ಗುರುಸೇವೆ ಮಾಡುವ ಶಕ್ತಿ ಕೊಡು ಎಂದು ಕೇಳಿದೆ ಎನ್ನುತ್ತಾನೆ ಶಿಷ್ಯ. ತನ್ನ ಶಿಷ್ಯನ ಭಕ್ತಿ ಶ್ರದ್ಧೆಗಳನ್ನು ಪರೀಕ್ಷಿಸಿದ ಗುರು ನಿನ್ನ ಸೇವೆ ನನಗೆ ಮೆಚ್ಚುಗೆಯಾಗಿದೆ. ಈಗ ನೀನು ಸಂದೀಪಕ, ಮುಂದೆ ಕುಲದೀಪಕನಾಗು. ನೀನು ನಿಜವಾಗಿಯೂ ನನ್ನ ಶಿಷ್ಯ ಎಂದು ಆಶೀರ್ವದಿಸಿದರು. ಇಲ್ಲಿ ಬಾಲಕ ತನ್ನ ಧನಾತ್ಮಕ ನಿಲುವಿನಿಂದಾಗಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿಯೂ ಗುರುಗಳಿಗೆ ಹಿತವಾಗುವ ಹಾಗೆ ತನ್ನ ಸೇವೆಯನ್ನು ನಿರ್ವಹಿಸುತ್ತಿದ್ದ. ಅವರು ಕೊಡುವ ಹಿಂಸೆ, ಮಾಡುವ ತಿರಸ್ಕಾರ ಅವಮಾನಗಳನ್ನೆಲ್ಲ ಸಹಿಸಿ ತನ್ನ ಕರ್ತವ್ಯಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದ. ಪರಿಣಾಮವಾಗಿ ಗುರುವಿನ ಹಾಗೂ ಪರಮಾತ್ಮನ ಪ್ರೀತಿಗೆ ಪಾತ್ರನಾದ ಎನ್ನುವ ಸಂದೇಶದೊಂದಿಗೆ ಪೂಜ್ಯ ಸ್ವಾಮೀಜಿಯವರು ಸತ್ಸಂಗವನ್ನು ಕೊನೆಗೊಳಿಸಿದರು.

ಮರುದಿನ ದಿನಾಂಕ 26-05-2018ರಂದು ಬೆಳಿಗ್ಗೆ ಶ್ರೀನಗರದಿಂದ ಹರಿದ್ವಾರಕ್ಕೆ ಹೊರಟು ದಾರಿಮಧ್ಯೆ ಅಲಕಾನಂದ ಮತ್ತು ಭಾಗೀರಥಿಯ ಸಂಗಮಕ್ಷೇತ್ರವಾದ ದೇವಪ್ರಯಾಗವನ್ನು ಸಂದರ್ಶಿಸಿದೆವು. ಪೂಜ್ಯ ಸ್ವಾಮೀಜಿಯವರು ದೇವ ಪ್ರಯಾಗದ ಸ್ಥಳ ಮಹಿಮೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ರಾಮಾಯಣದಲ್ಲಿ ಶ್ರೀರಾಮಚಂದ್ರ ಮಹಾ ಬ್ರಾಹ್ಮಣನಾದ ರಾವಣನನ್ನು ಸಂಹರಿಸಿದ್ದರಿಂದ ಬ್ರಹ್ಮಹತ್ಯಾ ದೋಷಕ್ಕೂ, ಶಿವಭಕ್ತನಾದ ರಾವಣನ ಸಂಹಾರದಿಂದಾಗಿ ಶಿವನ ಕೋಪಕ್ಕೂ ತುತ್ತಾಗುತ್ತಾನೆ. ಲಂಕೆಯಿಂದ ಅಯೋಧ್ಯೆಗೆ ಹಿಂತಿರುಗಿದ ರಾಮನಿಗೆ ಪಟ್ಟಾಭಿಷೇಕವಾಗಬೇಕಾದರೆ ಆತನು ದೋಷ ಮುಕ್ತನಾಗಬೇಕು ಎಂಬ ವಶಿಷ್ಠರ ಆದೇಶದ ಮೇರೆಗೆ ಶ್ರೀರಾಮ ದೇವ ಪ್ರಯಾಗದಲ್ಲಿ ಅನನ್ಯ ತಪಸ್ಸನ್ನು ಮಾಡುತ್ತಾನೆ. ವನವಾಸದ ಅವಧಿಯುದ್ದಕ್ಕೂ ಅಣ್ಣನ ನೆರಳಿನಂತಿದ್ದ ಲಕ್ಷ್ಮಣನೂ, ಋಷಿಕೇಶಕ್ಕೆ ಸಮೀಪದಲ್ಲಿರುವ ಲಕ್ಷ್ಮಣ ಜೂಲಾದಲ್ಲಿ ತಪಸ್ಸನ್ನಾಚರಿಸಿ ಬಳಿಕ ಅಯೋಧ್ಯೆಗೆ ತೆರಳಿ ರಾಜ್ಯಭಾರವನ್ನು ಮಾಡಿದರು ಎನ್ನುವ ಉಲ್ಲೇಖವನ್ನು ಸ್ವಾಮೀಜಿಯವರು ನಮಗೆ ಮನದಟ್ಟು ಮಾಡಿದರು. ದೇವ ಪ್ರಯಾಗದ ಸಂಗಮದಲ್ಲೂ ನಮಗೆ ವಿಶೇಷವಾದ ಆನಂದದ ಅನುಭವವಾಯಿತು. ನಮ್ಮ ಸಹಯಾತ್ರಿಕರಲ್ಲಿ ಕೆಲವರು ತೀರ್ಥಸ್ನಾನ ಮಾಡಿದರೆ ಕೆಲವರಿಗೆ ಪೂಜ್ಯ ಸ್ವಾಮೀಜಿಯವರು ಸಂಪ್ರೋಕ್ಷಣೆ ಮಾಡಿ ಖುಷಿಪಡಿಸಿದರು.





ಆ ಪವಿತ್ರ ಜಲವನ್ನು ಸ್ಪರ್ಶಿಸಿ ಸಂಭ್ರಮಿಸಿದ ನಾವು ಅಲ್ಲಿಯ ಪ್ರಕೃತಿಯ ಅದ್ಭುತ ಸೊಬಗನ್ನು ಸವಿಯುತ್ತಾ ಅಲ್ಲಿಂದ ಹೊರಟು ಹರಿದ್ವಾರದ ಕಡೆಗೆ ಪ್ರಯಾಣ ಬೆಳೆಸಿದೆವು. ಪೂಜ್ಯ ಸ್ವಾಮೀಜಿಯವರು ಮರುದಿವಸ ಮಂಗಳೂರಿನಲ್ಲಿ ಅಗತ್ಯ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿಮಿತ್ತ ಆ ದಿನ ಸಾಯಂಕಾಲವೇ ಹರಿದ್ವಾರದಿಂದ ದೆಹಲಿಗೆ ಪ್ರಯಾಣ ಮಾಡಿದರು. ಸ್ವಾಮೀಜಿಯವರನ್ನೂ ಬೀಳ್ಕೊಟ್ಟ ನಾವು ಆ ರಾತ್ರಿ ಹರಿದ್ವಾರದ ವಸತಿಗೃಹದಲ್ಲಿ ತಂಗಿದ್ದು ಮರುದಿವಸ ಬೆಳಿಗ್ಗೆ ಹರಿದ್ವಾರವನ್ನು ಸುತ್ತಾಡಿದೆವು. ಸಾಧಕರಿಗೆ ಅನುಕೂಲಕರವಾಗುವಂತಹ ಹಲವಾರು ಆಶ್ರಮಗಳನ್ನು ಹರಿದ್ವಾರದಲ್ಲಿ ನೋಡಿದೆವು, ಕೆಲವನ್ನು ಸಂದರ್ಶಿಸಿದೆವು.

ನಮ್ಮ ಸಹಯಾತ್ರಿಕರಲ್ಲಿ ಒಂದು ಆಕರ್ಷಕ ತಂಡ ಮುಂಬೈಯಿಂದ ಬಂದವರಿದ್ದು, ಯಾತ್ರೆಯುದ್ದಕ್ಕೂ ಎಲ್ಲ ಸದಸ್ಯರೂ ಅತ್ಯಂತ ಆತ್ಮೀಯವಾಗಿ ಮತ್ತು ಸಕ್ರಿಯವಾಗಿ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಎರಡು ಬಸ್ಸುಗಳಲ್ಲಿ ಪ್ರಯಾಣಿಸುತ್ತಿದ್ದ ನಾವು ಕ್ಷೇತ್ರಗಳನ್ನು ಸಂದರ್ಶಿಸುವಾಗ ಹಾಗೂ ವಸತಿಗೃಹಗಳಲ್ಲಿ ಪರಸ್ಪರ ಪ್ರೀತಿ ವಿಶ್ವಾಸವನ್ನು ಹಂಚಿಕೊಳ್ಳುತ್ತಿದ್ದೆವು. ಉತ್ತಮ ಸಂಘಟಕರಾದ ಪೇಟೆಮನೆ ಪ್ರಕಾಶಣ್ಣ, ರೋಹಿತಣ್ಣ ಇನ್ನೊಬ್ಬ ಪ್ರಕಾಶಣ್ಣನವರು ಯಾತ್ರೆಯ ಕಾರ್ಯ ಚಟುವಟಿಕೆಗಳನ್ನು ನಿಭಾಯಿಸುವಲ್ಲಿ ಮುಂಚೂಣಿಯಲ್ಲಿ ಇರುತ್ತಿದ್ದರು. ಪೂರ್ವಾಹ್ನ 11.00ಘಂಟೆಗೆ ನಾವು ಹರಿದ್ವಾರದಿಂದ ದೆಹಲಿಗೆ ಹೊರಟರೆ ಮುಂಬೈ ತಂಡದ ಬಂಧುಗಳು ಹರಿದ್ವಾರದಿಂದ ನೇರ ಮುಂಬೈಗೆ ಪ್ರಯಾಣ ಬೆಳೆಸಿದರು. ಅಪರಾಹ್ನ 3.00 ಗಂಟೆಗೆ ದೆಹಲಿಯಿಂದ ವಿಮಾನದಲ್ಲಿ ಹೊರಟ ನಾವು ಸಾಯಂಕಾಲ 6.00 ಗಂಟೆಗೆ ಬೆಂಗಳೂರು ತಲಪಿ, ಅಲ್ಲಿಂದ 7.30 ಗಂಟೆಯ ವಿಮಾನದಲ್ಲಿ ಹೊರಟು ರಾತ್ರಿ 9.00 ಗಂಟೆಗೆ ಮಂಗಳೂರು ವಿಮಾನ ನಿಲ್ದಾಣದಲ್ಲಿ ಇಳಿದೆವು. ಯಾತ್ರೆಯ ಅವಧಿಯಲ್ಲಿ ಎಲ್ಲಿಯೂ ಅಡ್ಡಿಪಡಿಸದ ಮಳೆರಾಯ ಮಂಗಳೂರಿನಲ್ಲಿ ಗುಡುಗು, ಮಿಂಚು ಸಹಿತ ಬಹಳ ಸಂಭ್ರಮದಿಂದ ನಮ್ಮನ್ನು ಸ್ವಾಗತಿಸಿದ ಅನುಭವ ನಮಗಾಯಿತು. ಉತ್ತರ ಭಾರತದಲ್ಲಿ ಗಂಗಾಮಾತೆ ನಮ್ಮನ್ನು ಭಾವನಾತ್ಮಕವಾಗಿ ಮತ್ತು ಅಧ್ಯಾತ್ಮಿಕವಾಗಿ ಆನಂದ ಪಡಿಸಿದರೆ, ಇಲ್ಲಿಯೂ ಅವಳು ಮಳೆಯ ರೂಪದಲ್ಲಿ ನಮಗೆ ತಂಪು ನೀಡಿದಳೋ ಎಂಬಂತೆ ಭಾಸವಾಯಿತು. ನಾವೆಲ್ಲರೂ ಪರಸ್ಪರ ಆತ್ಮೀಯತೆಯನ್ನು ಹಂಚಿಕೊಳ್ಳುತ್ತಾ ಪೂಜ್ಯ ಸ್ವಾಮೀಜಿ ಹಾಗೂ ಮಾತಾಜಿಯವರ ಸ್ಮರಣೆಯ ಜೊತೆ ಜೊತೆಗೆ ಯಾತ್ರೆಯ ಸವಿನೆನಪುಗಳೊಂದಿಗೆ ನಮ್ಮ ನಮ್ಮ ಊರುಗಳಿಗೆ ನಿರ್ಗಮಿಸಿದೆವು. ॥ ಜೈ ಗುರುದೇವ್ ॥

# ಯೋಗವಾಸಿಷ್ಠ ಬೋಧಾಮೃತ

● ಟಿ.ಎನ್. ಶಿವಕುಮಾರ್
ಬೆಂಗಳೂರು

## ದೈನಂದಿನ ಯುವ ಜಾಗೃತಿ – ೧೧೦

ಪ್ರತಿ ದಿನವೂ "ನನ್ನ ವಿಧಿ ಚೆನ್ನಾಗಿಲ್ಲ, ನನ್ನ ಹಣೆಬರಹ ಚೆನ್ನಾಗಿಲ್ಲ" ಆದ್ದರಿಂದ ನನಗೆ ಈ ಜನ್ಮದಲ್ಲಿ ಇಂದು ಇಂತಹ ಕಷ್ಟ ಬಂದಿದೆ ಎಂದು ನರಳುವವರನ್ನೇ ನಾವು ಹೆಚ್ಚಾಗಿ ಕಾಣುತ್ತಿರುತ್ತೇವೆ. ನಮ್ಮೆಲ್ಲರ ಜೀವನವೂ ಸದಾ ನಮ್ಮಗಳ ಹಣೆಬರಹದಂತೆಯೇ ನಡೆಯುವುದಾದರೆ ನಾವೆಲ್ಲರೂ ಬದುಕಿನಲ್ಲಿ ಏಕೆ ಕಷ್ಟ ಪಡಬೇಕು?

ಹೀಗಿದ್ದರೂ ನಾವೆಲ್ಲರೂ ಅನೇಕ ವ್ಯವಹಾರಗಳಲ್ಲಿ ಏಕೆ ತೊಡಗಿ ಕೊಳ್ಳುತ್ತೇವೆ? ಎಂದೂ ಅನ್ನಿಸುತ್ತದೆ. ಇದಕ್ಕೆ ನಾವು, ನಮ್ಮ ಇಂದಿನ ಈಗಿನ ಪ್ರಯತ್ನಪಡಲೇ ಬೇಕು, ಆದರೆ ಅದರ ಫಲ ಮಾತ್ರ ನಮ್ಮ ಪೂರ್ವ ಜನ್ಮದ (ಪುಣ್ಯದ) ಕರ್ಮದ ಫಲವಿದ್ದಂತೆ ಆಗುತ್ತದೆ ಎಂದುಕೊಂಡೇ ಬದುಕುತ್ತಿದ್ದೇವೆ. ಹಾಗಾದರೆ ನಮ್ಮ ಈಗಿನ ಕರ್ಮದ ಫಲ ನಾವು ಈಗೇಕೆ ಪಡೆಯಲು ಸಾಧ್ಯವಿಲ್ಲ? ಅದಕ್ಕಾಗಿ ನಾವು ಮುಂದಿನ ಜನ್ಮದವರೆಗೆ ಕಾಯಬೇಕೆ? ಎಂದೆಲ್ಲಾ ಅನ್ನಿಸಿಬಿಡುತ್ತದೆ.

ಇದರಿಂದ ನಮ್ಮ ಪ್ರಯತ್ನವೆನ್ನುವುದು, ಹಿಂದಿನದು, ಇಂದಿನದು ಎಂದೆಲ್ಲಾ ಎಷ್ಟು ಬಗೆಗಳಿವೆ? ಇವುಗಳಲ್ಲಿ ಯಾವುದರ ಪ್ರಭಾವ ನನ್ನ ಮೇಲೆ ಹೆಚ್ಚಾಗಿ ಆಗುತ್ತದೆ? ಎಂದೆಲ್ಲಾ ಅನುಮಾನಗಳು ನಮಗೆ ಉಂಟಾಗುತ್ತದೆ. ಈ ಅನುಮಾನವನ್ನು ಪರಿಹರಿಸಿಕೊಳ್ಳಲು ಈ ವಿಚಾರದಲ್ಲಿರುವ ಈ ಸ್ಪಷ್ಟ ವಿವರಣೆಯನ್ನು ಸರಿಯಾಗಿ ತಿಳಿದುಕೊಳ್ಳಬೇಕು –

**ಪ್ರಾಕ್ತನಂ ಚೈಹಿಕಂ ಚೇತಿ ದ್ವಿವಿಧಂ ವಿದ್ಧಿ ಪೌರುಷಂ ।**
**ಪ್ರಾಕ್ತನೋಧ್ಯತನೇ ನಾಶು ಪುರುಷಾರ್ಥೇನ ಜೀಯತೇ ॥**

– ಮುಮುಕ್ಷು ವ್ಯವಹಾರ ಪ್ರಕರಣ ೪–೧೭

ಪೌರುಷ (ನಮ್ಮ ಪ್ರಯತ್ನ)ಗಳಲ್ಲಿ ಹಿಂದಿನದು, ಈಗಿನದು ಎಂದು ಎರಡು





ವಿಧವಾಗಿವೆ. (ನಮ್ಮ) ಹಿಂದಿನದ್ದನ್ನು ಈಗಿನ ಪೌರುಷ (ಪ್ರಯತ್ನ)ವು ಗೆದ್ದುಬಿಡುವುದು.

ನಮ್ಮ ಮುಂದೆ ಈಗಿರುವ ಸಮಸ್ಯೆ ನಮ್ಮ ಪುರುಷ ಪ್ರಯತ್ನಗಳಲ್ಲಿ ಎಷ್ಟು ವಿಧಗಳಿವೆ ಎಂದರೆ ಮೊದಲನೆಯದು ನಾವು ಮಾಡಿದ ಹಿಂದಿನ ಪ್ರಯತ್ನ ಮತ್ತು ಎರಡನೆಯದೇ ನಾವು ಈಗ ಮಾಡಬೇಕಾಗಿರುವುದು, ಈಗಲೇ ನಮ್ಮ ಅಧೀನದಲ್ಲಿ ಇದ್ದು, ನಾವು ಬಯಸಿದಂತೆ ಮಾಡಬಹುದಾದ್ದರಿಂದ ಅದರಿಂದಾಗಬಹುದಾದ ಫಲಾಫಲಗಳನ್ನೆಲ್ಲಾ ಗಮನಿಸಿ ನಾವು ಈಗ ಸರಿಯಾಗಿ ಮಾಡಲು ಸಾಧ್ಯವಿದೆ. ಆದರೆ ನಮ್ಮ ಹಿಂದಿನ ಕರ್ಮಗಳು ಮುಗಿದುಹೋಗಿಸುವುದರಿಂದ ಅವಕ್ಕೆ ಬರುವ ಫಲಗಳನ್ನು ಈಗ ನಾವು ಬದಲಿಸಲು ಆಗುವುದಿಲ್ಲವೆಂದೇ ಹೇಳಬಹುದು. ಆದ್ದರಿಂದ ನಾವು ಹಿಂದೆ ಮಾಡಿದ ತಪ್ಪುಗಳನ್ನು ಇಂದು ಮಾಡದೇ, ಈಗ ಸರಿಯಾಗಿ ಪ್ರಯತ್ನಪಟ್ಟರೆ ಒಳ್ಳೆಯ ಫಲ ಸಿಗುತ್ತದೆ. ಆದ್ದರಿಂದಲೇ ನಮ್ಮ ಇಂದಿನ ಪ್ರಯತ್ನಗಳು, ನಮ್ಮ ಹಿಂದಿನ ಪ್ರಯತ್ನಗಳಿಗಿಂತ ಹೆಚ್ಚು ಪ್ರಬಲವಾಗಿವೆ.

## ದೈನಂದಿನ ಯುವ ಜಾಗೃತಿ – ೧೧೧

ನಮ್ಮ ಜೀವನದಲ್ಲಿ ನಾವು ಏನೇ ಪಡೆಯಬೇಕಿದ್ದರೂ ಸಹ ಅದಕ್ಕಾಗಿ ನಾವು ಮಾಡಿದ ಹಿಂದಿನ ದಿನಗಳ ಪ್ರಯತ್ನಗಳನ್ನೇ ನಂಬಿಕೊಳ್ಳದೇ ನಾವು ಇಂದು ಮಾಡಬೇಕಾಗಿರುವ ಪ್ರಯತ್ನಗಳಲ್ಲಿ ಹೆಚ್ಚು ಆಸಕ್ತಿ ಹಾಗೂ ಶ್ರದ್ಧೆಗಳನ್ನಿಟ್ಟು ಮಾಡಿದರೆ ಆಗ ನಮಗೆ ನಾವು ಬಯಸುವ ಫಲಸಿಕ್ಕಿ ಸಂತೋಷವಾಗುತ್ತದೆ. ಇದು ಹೇಗೆಂದರೆ ನಾವು ನಿನ್ನೆಯ ದಿನಗಳಲ್ಲಿ ಚೆನ್ನಾಗಿ ಓದಿದ್ದೇವೆ ಎಂದು ನಂಬಿಕೊಂಡು ಇಂದು ಸರಿಯಾಗಿ ಓದದಿದ್ದರೆ ನಮ್ಮ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದೊರೆಯುವುದು ಕಷ್ಟವಾಗುತ್ತದೆ. ನಾವು ಹಿಂದಿನ ಪರೀಕ್ಷೆಗಳಲ್ಲಿ ಹೆಚ್ಚು ಪಡೆದಿದ್ದಿರಬಹುದು. ಹಾಗೆಂದು ನಾವು ಸುಮ್ಮನಿರದೆ ಇಂದೂ ಸಹ ಚೆನ್ನಾಗಿ ಓದಿ ಪರೀಕ್ಷೆಗೆ ಸಿದ್ಧರಾದರೆ ಇಂದಿನ ನಮ್ಮ ಪರೀಕ್ಷೆಯಲ್ಲಿ ಖಂಡಿತವಾಗಿ ಹೆಚ್ಚು ಅಂಕಗಳನ್ನು ಪಡೆಯಬಹುದು.

ಆದರೆ, ನಾವು ನಿನ್ನೆಗಿಂತ ಇಂದು ಹೆಚ್ಚು ಪ್ರಯತ್ನ ಪಡುತ್ತೇವೆ ಎಂದು ನಮ್ಮ ಇಚ್ಛೆ ಬಂದಂತೆ ಹೇಗೆ ಹೇಗೋ ಕಷ್ಟಪಟ್ಟರೆ ನಾವು ಬಯಸಿದ ಫಲ ಸಿಗುವುದಿಲ್ಲ. ಇದು ಏಕೆ? ಹೀಗೆ ಆಗುತ್ತದೆ ಎಂದರೆ –

**ಯೋಯಮರ್ಥಂ ಪ್ರಾರ್ಥಯತೇ ತದರ್ಥಂ ಚೇಹತೇ ಕ್ರಮಾತ್ ।**
**ಅವಶ್ಯಂ ಸ ತಮಾಪ್ನೋತಿ ನ ಚೇದರ್ಧಾನ್ನಿವರ್ತತೇ ॥**
– ಮುಮುಕ್ಷು ವ್ಯವಹಾರ ಪ್ರಕರಣ ೪–೧೨

ಯಾರು ತಾನು ಬಯಸಿದ್ದನ್ನು ಪಡೆಯಲು ಕ್ರಮವಾಗಿ ಪ್ರಯತ್ನ ಮಾಡುವನೋ ಅವನು ಅದನ್ನು ಅರ್ಧದಲ್ಲಿಯೇ ಬಿಡದೇ ಯತ್ನ ಮಾಡಿದರೆ ಅದನ್ನು ಪಡೆದೇ ಪಡೆಯುವನು.

ಇದರಿಂದ ನಮಗೆ ತಿಳಿಯುವುದೇನೆಂದರೆ ಎಷ್ಟೇ ಕಷ್ಟ ಬರಲಿ ನಾವು ಬಿಡದೆ ನಮ್ಮ ಗುರಿ ಮುಟ್ಟಲು ಸಾಧನೆ/ಪ್ರಯತ್ನ ಮಾಡುತ್ತಿರಬೇಕು. ಆದರೆ ನಾವು ಬಯಸಿದ ಫಲ ಸಿಗುವವರೆಗೆ ನಮ್ಮ ಪ್ರಯತ್ನವನ್ನೂ ಮಧ್ಯದಲ್ಲಿ ಎಂದಿಗೂ ನಿಲ್ಲಿಸಬಾರದು. ಇಷ್ಟೇ ಅಲ್ಲದೆ ನಮಗೆ ಹಸಿವಾದಾಗ ಊಟ ಮಾಡಬೇಕು, ಖಾಯಿಲೆ ಬಂದಾಗ ಔಷಧಿ ತೆಗೆದುಕೊಳ್ಳಬೇಕು. ಇದೇ ವ್ಯತ್ಯಾಸವಾದರೆ ನಮಗೆ ತೊಂದರೆ.

ಆದ್ದರಿಂದ ನಮ್ಮ ಹಿಂದಿನ ಪ್ರಯತ್ನಗಳನ್ನು ನಂಬಿಕೊಂಡು ನಾವು ಎಂದೆಂದಿಗೂ ನಮ್ಮ ಇಂದಿನ ಪ್ರಯತ್ನಗಳಲ್ಲಿ ಸೋಮಾರಿತನ ತೋರಿ ಕಡಿಮೆ ಮಾಡಬಾರದು. ಹಾಗೂ ನಾವು ಪಡೆಯಬೇಕೆಂದು ಬಯಸಿದ ವಿಷಯದಲ್ಲಿ ಹೆಚ್ಚು ಶ್ರಮ ಸದಾ ವಹಿಸುತ್ತಿರಬೇಕು. ಇದೇ ನಮ್ಮ ಜೀವನದ ಗುರಿ ಸಾಧನೆಗೆ ಇರುವ ಬಹಳ ನೇರವಾದ ಹಾಗೂ ಉತ್ತಮವಾದ ಮಾರ್ಗ.

*********

**ಶ್ರೀ ಸಂಸ್ಥಾನದಲ್ಲಿ ಶ್ರೀ ಧನ್ವಂತರೀ ಹವನ**

ತಾ.25–10–2019ನೇ ಶುಕ್ರವಾರದಂದು
ಶ್ರೀ ಧನ್ವಂತರೀ ಜಯಂತಿಯ ಪ್ರಯುಕ್ತ ಶ್ರೀ ಸಂಸ್ಥಾನದಲ್ಲಿ ಪೂಜ್ಯ ಶ್ರೀಗಳವರ ದಿವ್ಯ ಉಪಸ್ಥಿತಿಯಲ್ಲಿ ಲೋಕಕಲ್ಯಾಣಾರ್ಥವಾಗಿ
**ಶ್ರೀ ಧನ್ವಂತರೀ ಹವನ**ವು ನಡೆಯಲಿರುವುದು.
ಭಗವದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ಅಪೇಕ್ಷೆ.
**ಕಾರ್ಯನಿರ್ವಾಹಕರು,** ಒಡಿಯೂರು ಶ್ರೀ ಸಂಸ್ಥಾನಮ್

ಹವನ ಮಾಡಿಸುವವರು ಸೇವಾವಿಭಾಗದಲ್ಲಿ ಹೆಸರು ನೋಂದಾಯಿಸಬಹುದು.





## ಪಶ್ಚಿಮಮುಖಿಗಳು

● ಡಾ. ವಸಂತಕುಮಾರ ಪೆರ್ಲ
ನಿವೃತ್ತ ನಿಲಯ ನಿರ್ದೇಶಕರು, ಆಕಾಶವಾಣಿ,
ಮಂಗಳೂರು

ಪೂರ್ವ ಮತ್ತು ಪಶ್ಚಿಮ ಎಂಬ ಎರಡು ಶಬ್ದಗಳು ಎರಡು ವಿರುದ್ಧ ದಿಕ್ಕುಗಳನ್ನು ಸಂಕೇತಿಸುವ ಹಾಗೆ ಹಿಂದಿನ ಮತ್ತು ಮುಂದಿನ ಎಂಬ ಅರ್ಥವನ್ನೂ ಕೊಡುತ್ತವೆ. (ಪೂರ್ವ–ಉತ್ತರ=ಪೂರ್ವೋತ್ತರ, ಪೂರ್ವ–ಅಪರ= ಪೂರ್ವಾಪರ). ಪೂರ್ವ ಹುಟ್ಟಿಗೂ, ಪಶ್ಚಿಮವು ಅಂತ್ಯ ಮತ್ತು ಅಂತ್ಯದಾಚೆಗಿನ ಸಂಗತಿಗಳಿಗೂ ಅರ್ಥವನ್ನು ಹಾಯಿಸುವ ಶಬ್ದ.

ಶಬ್ದಗಳ ಅರ್ಥದಲ್ಲಿರುವ ಈ ಅಂತರ ಬದುಕಿನ ಬಗೆಗಿನ ದೃಷ್ಟಿಕೋನ ಮತ್ತು ಆಚರಣೆಗಳಲ್ಲಿ ಕೂಡ ಕಂಡುಬರುತ್ತದೆ. ಪೂರ್ವದೇಶಗಳಲ್ಲಿ ಕುಟುಂಬ ಜೀವನಕ್ಕೆ ಪ್ರಾಧಾನ್ಯ ಇದ್ದರೆ ಪಶ್ಚಿಮ ದೇಶಗಳಲ್ಲಿ ಅಷ್ಟಾಗಿಲ್ಲ. ನಾವು ಅಧ್ಯಾತ್ಮಕ್ಕೆ ಹೆಚ್ಚು ಪ್ರಾಮುಖ್ಯ ಕೊಡುವವರಾದರೆ ಅವರು ಭೌತಿಕವಾದ – ಐಹಿಕ ಭೋಗ ಜೀವನಕ್ಕೆ ಪ್ರಾಮುಖ್ಯ ನೀಡುವವರು. ನಾವು ಹಿರಿಯರ ಮರಣಾ ನಂತರ ಅವರ ಸ್ಮರಣಾರ್ಥ ಅವರು ತೀರಿಕೊಂಡ ದಿನ ತಿಥಿ (ಶ್ರಾದ್ಧ) ಮಾಡುವವರಾದರೆ ಅವರು ಜನ್ಮದಿನವನ್ನು ಆಚರಣೆಯನ್ನು ಸಂಭ್ರಮೋಲ್ಲಾಸದಿಂದ ಆಚ–ರಿಸುವ ಕ್ರಿಯೆಯು ಭೌತಿಕ ಭೋಗಲಾಲಸೆಯ ಜೀವನಕ್ಕೆ ಅವರು ಕೊಡುವ ಪ್ರಾಧಾನ್ಯವನ್ನು ಸಂಕೇತಿಸುವಂತಿದೆ.

ಪೂರ್ವದಲ್ಲಿ ಹಿರಿಯರ ಬಗ್ಗೆ ಭಕ್ತಿ–ಗೌರವಗಳಿದ್ದರೆ ಪಶ್ಚಿಮದಲ್ಲಿ ಕಡಿಮೆ ಅಥವಾ ಇಲ್ಲ. ನಾವು ಹಣಕ್ಕೆ, ಐಶ್ವರ್ಯಕ್ಕೆ ಕಡಿಮೆ ಪ್ರಾಧಾನ್ಯ ನೀಡುವವರಾದರೆ ಅವರಿಗೆ ಹಣವೇ ಸರ್ವಸ್ವ. ನಮ್ಮಲ್ಲಿ ದಿನದಿಂದ ದಿನಕ್ಕೆ ವೃದ್ಧಾಶ್ರಮಗಳು ಹೆಚ್ಚಾಗುತ್ತಿರುವುದು ಮತ್ತು ಮಾನವೀಯ ಸಂಬಂಧಗಳು ಕಡಿಮೆಯಾಗುತ್ತಿರುವುದರ ಹಿಂದೆ ನಮ್ಮ ಪಶ್ಚಿಮಮುಖೀ ಜೀವನಶೈಲಿ ಪ್ರಧಾನ ಪಾತ್ರವಹಿಸುತ್ತಿದೆ. ನಾವು 'ಅಯಮ್ ನಿಜಃ ಪರೋಗತಿ ಗಣನಾ ಲಘು ಚೇತಸಾಮ್/ಉದಾರಚರಿತಾನಾಂತು ವಸುದೈವ ಕುಟುಂಬಕಮ್' ಅನ್ನುವ ಚಿಂತನೆಯವರು (ಸಂಕುಚಿತ ಮನೋಭಾವದವರಿಗೆ ಇದು ತನ್ನದು,

ಅದು ಪರರದು ಅನ್ನುವ ಬೇಧಭಾವ ಇರುತ್ತದೆ. ಉದಾರ ಚರಿತರಿಗೆ ಇಡೀ ಪ್ರಪಂಚವೇ ತನ್ನದು ಅನ್ನುವ ವಿಶಾಲ ಮನೋಭಾವ ಇರುತ್ತದೆ.)

ನಾವು ಪಶ್ಚಿಮಮುಖಿಗಳಾಗುವ ದಿಸೆಯಲ್ಲಿ ಹೊರಟು ಎರಡು ಶತಮಾನಗಳೇ ಆದವು. ನಾನೀಗ ಅದರ ವಿರುದ್ಧವಾಗಿ ಏನಾದರೂ ಹೇಳಿದರೆ ನಾನೇ ಅಪ್ರಸ್ತುತ ಆಗಿಬಿಡುವ ಅಪಾಯವಿದೆ. ಬ್ರಿಟಿಷರು ಸುಮಾರು ಎರಡುನೂರು ವರ್ಷಗಳ ಕಾಲ ಇಲ್ಲಿದ್ದು ವ್ಯಾಪಾರ ವಹಿವಾಹು ಮಾಡಿ, ಅನಂತರ ನಮ್ಮನ್ನಾಳಿ, ನಮ್ಮ ಬದುಕಿನ ಎಲ್ಲಾ ಮುಖಗಳನ್ನು ಪ್ರಭಾವಿಸಿದರು. ಹಾಗಾಗಿ ನಮ್ಮದನ್ನೆಲ್ಲ ಕಳೆದುಕೊಂಡು ಅಥವಾ ಮೂಲೆಗುಂಪು ಮಾಡಿ ಕಳೆದ ಐದಾರು ತಲೆಮಾರುಗಳಿಂದ ಪಶ್ಚಿಮದವರನ್ನು ಅನುಕರಿಸುತ್ತಾ ಬಂದೆವು.

ಆರಂಭದಲ್ಲಿ ಭಾಷೆ ಅನಂತರ ಸಂಸ್ಕೃತಿ, ಅನಂತರ ಅವರನ್ನೂ ನಾಚಿಸುವಂತಹ ಅವರ ರೀತಿಯಲ್ಲಿ ಬದುಕುವುದು! ಇವತ್ತು ನಾವು ಹಿರಿಯರ ದಿನವನ್ನು 'ತಿಥಿ'ಯಾಗಿ ಆಚರಿಸುವುದು ಕಡಿಮೆ. ಅವರನ್ನು ಸ್ಮರಿಸಿಕೊಂಡು ಏನಾಗಬೇಕಾಗಿದೆ! ಬದಲಾಗಿ ಹುಟ್ಟಿದ ದಿನವನ್ನು ಬರ್ತ್-ಡೇ ಎಂದು ಆಚ-ರಿಸುತ್ತೇವೆ. ದಿನಪೂರ್ತಿ ಶುಭಾಶಯ ಹಂಚಿಕೊಳ್ಳುತ್ತೇವೆ. ಹೋಟೆಲ್‌ಗಳಲ್ಲಿ ಅದ್ದೂರಿ ಪಾರ್ಟಿ ಏರ್ಪಡಿಸುತ್ತೇವೆ. ನಾವು ಮಕ್ಕಳಿಗೆ ಷೋಡಶ ಸಂಸ್ಕಾರ (ಹದಿನಾರು ಬಗೆಯ ಸಂಸ್ಕಾರ) ನೀಡಬೇಕೆಂಬ ಆಶಯವುಳ್ಳವರು. ಬದುಕು ಸರಿಯಾಗಿದ್ದಾಗ ಅಭಿವ್ಯಕ್ತಿಯೂ ಸರಿಯಾಗಿರುವುದು. ಈಗ ನಮ್ಮ ಭಾಷೆಯನ್ನು ನಾವು ಚೆನ್ನಾಗಿ ಆಡಬಲ್ಲೆವೇ? ನಮ್ಮ ಆಚಾರ ತಿಳಿದುಕೊಂಡಿದ್ದೇವೆಯೇ? ನಮ್ಮ ಹಿರಿಯರ ಬಗ್ಗೆ ತಿಳಿದುಕೊಂಡಿದ್ದೇವೆಯೇ?

'ಪ್ರೇಮಿಗಳ ದಿನ' ಆಚರಿಸುತ್ತೇವೆ. ಜೀವನದಲ್ಲಿ ಪ್ರೇಮಕ್ಕೆ ಕೊಡುವ ಸ್ಥಾನವನ್ನು ಕುಟುಂಬಪ್ರೀತಿಗೆ ಕೊಡುವುದಿಲ್ಲ. ಪ್ರೇಮಿಗಳ ದಿನವನ್ನು ಅಷ್ಟೊಂದು ವೈಭವದಿಂದ ಆಚರಿಸುವುದಾದರೆ ವಿಚ್ಛೇದನಗಳು ನಮ್ಮ ಸಮಾಜದಲ್ಲಿ ಯಾಕೆ ಹೆಚ್ಚಾಗುತ್ತಿದೆ?

ನಮ್ಮ ಪರಂಪರೆಯ ಬಗ್ಗೆ, ಜನಪದದ ಬಗ್ಗೆ ಬದುಕಿನ ರೀತಿರಿವಾಜುಗಳ ಬಗ್ಗೆ, ಸಂಸ್ಕಾರದ ಬಗ್ಗೆ, ತಿಳಿದುಕೊಳ್ಳುವುದಕ್ಕಿಂತಲೂ ಟಿ.ವಿ., ಸಿನಿಮಾಗಳ ನಾಟಕೀಯವಾದ ಜೀವನಶೈಲಿಯನ್ನು ಅನುಕರಿಸಲು ಹೊಟಿದ್ದೇವೆ. 'ನಮಸ್ಕಾರ'





ಅನ್ನುವ ಬದಲು 'ಗುಡ್ ಮಾರ್ನಿಂಗ್, ಗುಡ್ ಡೇ, ಗುಡ್ ಇವಿನಿಂಗ್'ಗಳೇ ತುಂಬಿಹೋಗಿವೆ. 'ನಮಸ್ಕಾರ' ಅನ್ನುವಲ್ಲಿ ಇರುವ ದೇವಸಮಾನವಾದ 'ನಿನಗೆ ನಮಿಸಿವೆ' ಎಂಬ ಅಧ್ಯಾತ್ಮಭಾವಕ್ಕಿಂತ ಗುಡ್ ಡೇ ಎಂಬಲ್ಲಿ ಈ ಸ್ಥಿತಿ ಭೌತಿಕವಾಗಿ ಏನಾದರೂ ಹೊಂದಿಕೊಳ್ಳೋಣ ಎಂಬ ವ್ಯಾವಹಾರಿಕ ಭಾವವೇ ಅಧಿಕವಾಗಿರುವಂತೆ ಕಾಣುವುದಿಲ್ಲವೇ? ನಿಮ್ಮದೆಲ್ಲವೂ ತಪ್ಪು ಎಂಬ ಭಾವವನ್ನು ಪಶ್ಚಿಮದವರು ಹೆಜ್ಜೆ ಹೆಜ್ಜೆಗೂ ನಮ್ಮ ತಲೆಗೆ ತುಂಬುತ್ತಾ ಬಂದರು. ನೀವೇ ದೊಡ್ಡವರು ಎಂಬ ಆರಾಧನಾ ಭಾವವನ್ನು ನಾವು ಸದಾ ತಲೆಯಲ್ಲಿ ತುಂಬಿಕೊಂಡೆವು. ನಿರಂತರ ಹೀನೈಸುವಿಕೆಯನ್ನು ಕೇಳುತ್ತಾ ಬಂದ ಜನ ಪಾಪ ಇನ್ನೇನು ಮಾಡಲು ಸಾಧ್ಯ?

ನಮ್ಮ ಪಶ್ಚಿಮಮುಖೀ ಚಿಂತನೆ ನಿಧಾನವಾಗಿ ಹೇಗೆ ಅಮೂಲ್ಯವಾದ ಸನಾತನವಾದ ಸಂಸ್ಕೃತಿಯೊಂದನ್ನು ಗೆದ್ದಲಿನ ಹಾಗೆ ತಿನ್ನುತ್ತ ಬಂದಿತು ಎಂಬುದು ನನಗೆ ಕುತೂಹಲಕರವಾಗಿ ಕಾಣಿಸುವ ಅಂಶ. ಅದರಿಂದಾಗಿ ನಮ್ಮ 'ಧರ್ಮ' (ಇಲ್ಲಿ ಧರ್ಮ ಎಂದರೆ ರಿಲಿಜಿಯನ್ ಎಂಬ ಅರ್ಥದಲ್ಲಿ ಅಲ್ಲ. ಬದುಕಿನ ಶೈಲಿ – ವೇ ಆಫ್ ಲಿವಿಂಗ್, ಚಿಂತನ ಕ್ರಮ ಎಂಬ ಅರ್ಥದಲ್ಲಿ ಹೇಳುತ್ತಿದ್ದೇನೆ) ಹೇಗೆ ದುರ್ಬಲವಾಗುತ್ತ ಬಂತು; ಬಾಹ್ಯವಾದ ಉಡುಗೆ ತೊಡುಗೆ, ಆಹಾರ, ವಿಹಾರ, ಜೀವನಕ್ರಮ ಮತ್ತು ಅಂತರಂಗಕ್ಕೆ ಸಂಬಂಧಿಸಿದ ಚಿಂತನ ವಿಧಾನ ಎಲ್ಲವೂ ಹೇಗೆ ಪಶ್ಚಿಮದತ್ತಲೇ ಸಾಗಿತು ಎಂಬುದು ನನಗೆ ಆಸಕ್ತಿದಾಯಕವಾಗಿ ಕಾಣಿಸುತ್ತಿದೆ.

ಒಳ್ಳೆಯ ವಿಚಾರಗಳನ್ನು ಸ್ವೀಕರಿಸಬಾರದೆಂದೇನಿಲ್ಲ. ಆದರೆ ಅಂ-ಧಾನುಕರಣೆ ಮಾಡಿದರೆ ಹೇಗೆ? ಜಗತ್ತಿಗೆ ಬಹುದೊಡ್ಡ ನಾಗರಿಕತೆ ಕೊಟ್ಟು ಬೆಳಕು ತೋರಿಸಿದ ಈ ಪೂರ್ವದೇಶ ತುಂಬ ಕಳೆದುಕೊಳ್ಳುತ್ತಿದೆಯೇ? ನಾವು ಪಶ್ಚಿಮಮುಖಿಗಳಾಗುವುದಲ್ಲ; ಅವರು ಪೂರ್ವಮುಖಿಗಳಾಗುವಂತೆ ನಾವು ಮಾಡಬೇಕಿತ್ತು ಅನ್ನಿಸುತ್ತದೆ ಕೆಲವೊಮ್ಮೆ; ಅಥವಾ ನನ್ನ ತಪ್ಪು ಇರಲೂಬಹುದು!

***********

**"ಪ್ರತಿಯೊಂದು ಕಾರ್ಯದ ಹಿಂದೆ ಒಂದು ಚಿಂತನೆ ಇರುತ್ತದೆ. ಚಿಂತನೆ, ವಿಚಾರಗಳನ್ನನ್ನುಸರಿಸಿ ಮನುಷ್ಯನ ಕೃತ್ಯಗಳು ಉಂಟಾಗುತ್ತವೆ. ಆದುದರಿಂದ ಸತ್ಕರ್ಮಗಳನ್ನು ಗೈಯ್ಯುವುದಕ್ಕೆ ಸತ್‌ಚಿಂತನೆಗಳು ಬೇಕಾಗುತ್ತವೆ."**

**– ಒಡಿಯೂರು ಶ್ರೀ**

# ನಾರದ ಭಕ್ತಿಸೂತ್ರ

● ಗೀತಾ ರಮೇಶ್

ಭಗವಂತ ಸಕಲ ಜೀವರಾಶಿಗಳಿಗೆ ವಿಧಾತ. ಈ ಭಗವಂತನ ಸೃಷ್ಟಿಯಲ್ಲಿ ಚೇತನ ಮತ್ತು ಅಚೇತನ ಎಂಬ ಎರಡು ವರ್ಗಗಳನ್ನು ಕಾಣಬಹುದು. ಸ್ವತಂತ್ರವಾಗಿ ಆಲೋಚನೆ ಮಾಡುವ ತನ್ನ ಜೀವನವನ್ನು ತನಗೆ ಬೇಕಾದಂತೆ ರೂಪಿಸಿಕೊಳ್ಳಲು ಶಕ್ತಿ ಇರುವುದು ಈ ಮನಷ್ಯನಿಗೆ ಮಾತ್ರ. ಆದ್ದರಿಂದಲೇ ನಮ್ಮ ದಾಸರು ಹೇಳಿದ್ದು – "ಮಾನವ ಜನ್ಮ ದೊಡ್ಡದು, ಹಾಳು ಮಾಡಲುಬೇಡಿ ಹುಚ್ಚಪ್ಪಗಳಿರಾ" ಎಂದು. ಮಾನವ ಬುದ್ಧಿಜೀವಿ. ಇವನು ಮೊದಲಿನಿಂದಲೂ ಯೋಚಿಸುತ್ತಾ ಬಂದವನು. ನಾನು ಯಾರು? ಈ ಪ್ರಪಂಚ ಹೇಗೆ ಸೃಷ್ಟಿಯಾಯಿತು? ಈ ನಿಟ್ಟಿನಲ್ಲಿ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡವು. ಈ ವಿಶ್ವದ ರಚನೆಯನ್ನು ನಮ್ಮ ಹಿಂದೂ ಸಂಸ್ಕೃತಿ, ನಮ್ಮ ಋಷಿ–ಮುನಿಗಳು ಕೊಟ್ಟಿದ್ದಾರೆ. ವಿಶೇಷವೇನೆಂದರೆ ಇಂದಿನ ಆಧುನಿಕ ಭೌತಶಾಸ್ತ್ರ ಸಿದ್ಧಾಂತವು ವಿಶ್ವದ ರಚನೆಯನ್ನು ಏನು ಪ್ರತಿಪಾದಿಸುತ್ತದೋ, ಅದೇ ಸಿದ್ಧಾಂತವನ್ನು ನಮ್ಮ ಋಷಿ–ಮುನಿಗಳು ತಿಳಿಸಿದ್ದಾರೆ. ಈಗಿನ ಭೌತಶಾಸ್ತ್ರ ವಿಶ್ವದ ರಚನೆಯನ್ನು 'Big Bang Theory' ಮೂಲಕ ಹೇಳುತ್ತದೆ. ಈ ವಿಶ್ವ ರಚನೆಯಾಗುವುದರ ಮೊದಲು ಎಲ್ಲಾ ಆಕಾಶಕಾಯಗಳು ಒಟ್ಟುಗೂಡಿ ಬೆಂಕಿಯ ಚೆಂಡಿನಂತೆ ಇತ್ತು. ಇದನ್ನು 'Predominal Fire Ball' ಎಂದು ಹೇಳುತ್ತಾರೆ. ಈ ಚೆಂಡು ಸ್ಫೋಟಗೊಂಡು ಗ್ರಹ, ನಕ್ಷತ್ರಗಳಾಗಿ ಮಾರ್ಪಟಾಯಿತು. ಆ ನಂತರ ಸಮುದ್ರದಲ್ಲಿ 'Ozone' ಆಮ್ಲಜನಕ ಉತ್ಪತ್ತಿಯಾಗಿ ಸಸ್ಯರಾಶಿಯ ಉಗಮವಾಯಿತು. ನಂತರ ಪ್ರಾಣಿಜೀವಿಗಳು ಹುಟ್ಟಿಕೊಂಡವು. ಈ ಸಿದ್ಧಾಂತವನ್ನು ನಮ್ಮ ಋಷಿಮುನಿಗಳು ಸಾವಿರಾರು ವರ್ಷದ ಹಿಂದೆ ತಪಸ್ಸಿನ ಮೂಲಕ, ಧ್ಯಾನದ ಮೂಲಕ ಪಡೆದುಕೊಂಡರು. ಈ ಜ್ಞಾನ ಸಂಗ್ರಹಿತವಾದುದಲ್ಲ. ಅದು ಸಾಕ್ಷಾತ್ ಭಗವಂತನಿಂದಲೇ ಅಭಿವ್ಯಕ್ತವಾದದ್ದು.

ಈ ಎಲ್ಲಾ ಜ್ಞಾನವನ್ನು ಶ್ಲೋಕರೂಪವಾಗಿ, ಶೃತಿರೂಪವಾಗಿ ಬರೆದಿದ್ದರು. ವೇದಗಳಲ್ಲಿ ನಾಲ್ಕು ಭಾಗಗಳಿವೆ. ಸಂಹಿತಾ, ಬ್ರಾಹ್ಮಣಾ, ಅರಣ್ಯಕ ಮತ್ತು





ಉಪನಿಷತ್. ಮೊದಲ ಮೂರು ಭಾಗದಲ್ಲಿ ನೈಸರ್ಗಿಕ ಚಲನವಲನಗಳು ದೈನಂದಿನ ಚಟುವಟಿಕೆಗಳನ್ನು ವಿವರಿಸಿದರೆ ನಾಲ್ಕನೇ ಭಾಗದಲ್ಲಿ ವೇದಾಂತ ಸಾರವನ್ನು ಬರೆದಿದ್ದಾರೆ. ಇದನ್ನೇ ಉಪನಿಷತ್ ಎಂದು ಕರೆಯುವುದು. ಈ ವೇದಾಂತದ ಪ್ರಕಾರ ಈ ಜಗತ್ತಿನ ಹಿಂದಿರುವ ಮೂಲ ಸತ್ಯ ಬ್ರಹ್ಮ ಪರಮಾತ್ಮ. ಈ ಸೃಷ್ಟಿಯು ಪರಬ್ರಹ್ಮನಿಂದಲೇ ಆಗಿದೆ. ನಾವು ಜೀವಾತ್ಮರೂ ಕೂಡ ಇದರ ಒಂದು ಅಂಶ. ನಾವೆಲ್ಲರೂ ಕೂಡ ಆತ್ಮಸ್ವರೂಪಿಗಳೇ.

ಶ್ರೀಕೃಷ್ಣನು ಶ್ರೀಮದ್ ಭಗವದ್ಗೀತೆಯಲ್ಲಿ ಸಾಂಖ್ಯಾ ಯೋಗದಲ್ಲಿ ಅರ್ಜುನನಿಗೆ ಇದನ್ನೇ ಉಪದೇಶಿಸುತ್ತಾನೆ. ಈ ಆತ್ಮನು ಅವ್ಯಕ್ತನು, ಅಚಿಂತ್ಯನು ಮತ್ತು ವಿಕಾರರಹಿತನಾಗಿದ್ದಾನೆ. ಆದರೆ ನಾವು ಸಾಮಾನ್ಯ ಮನುಷ್ಯರು ಈ ದೇಹವೇ ನಾನು ಎಂದು ಭಾವಿಸಿ ಈ ದೇಹದ ಮೇಲೆ ಅವಿರತವಾದ ಮೋಹವನ್ನು ಬೆಳೆಸಿಕೊಂಡು ಸಂಸಾರದ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ಹಾಗಾದರೆ ಈ ಪರಮಜ್ಞಾನವನ್ನು ಪಡೆಯಬೇಕಾದರೆ ಏನು ಮಾಡಬೇಕು?

ಸತ್ಯ, ಧರ್ಮ ಮಾರ್ಗದಲ್ಲೇ ನಡೆಯಬೇಕು. ಇಂದ್ರಿಯ ನಿಗ್ರಹವನ್ನು ಅಭ್ಯಾಸಮಾಡಬೇಕು ಮತ್ತು ಪರಮಾತ್ಮನನ್ನು ಭಜಿಸಬೇಕು. ಈ ಪರಮಾತ್ಮನನ್ನು ಭಜಿಸುವುದಕ್ಕೆ ಆರಾಧಿಸುವುದಕ್ಕೆ ಅನೇಕ ಪಂಗಡಗಳು ಬಂದವು. ಅನೇಕ ಭಕ್ತ ಶ್ರೇಷ್ಠರು ದಾರಿಗಳನ್ನು ತೋರಿದರು. ಆ ಭಗವಂತನ ಅನುಗ್ರಹವಾಗಬೇಕಾದರೆ ಅದು ಭಕ್ತಿಯಿಂದ ಮಾತ್ರ ಸಾಧ್ಯ ಎಂದು ಬಣ್ಣಿಸಿದ್ದಾರೆ. ಈ ಭಕ್ತಿ ಭಾವನೆ ಅತ್ಯಂತ ಪ್ರಾಚೀನವಾದುದು. ಋಗ್ವೇದ ಸಂಹಿತೆಯಲ್ಲಿ ಭಕ್ತಿಯ ಬಗ್ಗೆ ಉಲ್ಲೇಖವಿದೆ. ಕಠೋಪನಿಷತ್, ಮಂಡೂಕೋಪನಿಷತ್ತುಗಳಲ್ಲೂ ಭಕ್ತಿಯ ವ್ಯಾಖ್ಯಾನವನ್ನು ನೋಡಬಹುದು.

ಶ್ವೇತಾಶ್ವರ ಉಪನಿಷತ್ತಿನಲ್ಲಿ ಭಕ್ತಿ ಶರಣಾಗತಿ ಎಂಬ ಪದಗಳ ಪ್ರಯೋಗಗಳಿವೆ. ಹೀಗೆ ವೇದ ಉಪನಿಷತ್ತಿನಲ್ಲಿ ಕಂಡು ಬಂದಿರುವ ದೇವತಾ ಪ್ರೇಮ, ಶರಣಾಗತಿ ಅನುಗ್ರಹ ಮೊದಲಾದ ಭಕ್ತಿಯ ಹಲವು ಪ್ರಕಾರಗಳು ಬೆಳೆದು ಭಕ್ತಿ ಸಾಹಿತ್ಯವೆಂದೇ ಪ್ರಸಿದ್ಧಿಯಾಗಿದೆ. ಇದರಲ್ಲಿ ಮುಖ್ಯವಾದವುಗಳು ಭವದ್ಗೀತೆಯ ಕರ್ಮ ಯೋಗದ 25–42 ಶ್ಲೋಕಗಳು. ವಿಷ್ಣುಪುರಾಣ, ಭಾಗವತ ಶಾಂಡಿಲ್ಯ ಭಕ್ತಿ ಸೂತ್ರ, ನಾರದ ಭಕ್ತಿಸೂತ್ರ.

ಈ ಭಕ್ತಿಪಂಥದ ನಿಲುವು ಏನೆಂದರೆ ಭಕ್ತಿಯ ಮೂಲಕ ಭಗವಂತನ ಕೃಪೆಗೆ ಒಳಗಾಗಬಹುದು. ಇದು ಅತ್ಯಂತ ಸುಲಭ ಮಾರ್ಗ ಎಂಬುದು ಎಲ್ಲಾ ಭಕ್ತಶ್ರೇಷ್ಠರ ಅನಿಸಿಕೆ.

ಈ ಭಕ್ತಿ ಮಾರ್ಗದಲ್ಲಿ ಎಲ್ಲರಿಗೂ ಅಧಿಕಾರವಿದೆ. ಜಾತಿ, ಕುಲ, ಲಿಂಗ, ವಿದ್ಯೆ, ಅಂತಸ್ತು ಯಾವುದರ ಅಡ್ಡಿಯೂ ಇಲ್ಲ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಗುಹಾ, ನಂದಾ, ಬೇಡರಕಣ್ಣಪ್ಪ ಇವರ್‍ಯಾರೂ ಉನ್ನತ ಜಾತಿಯಲ್ಲಿ ಜನ್ಮ ತಾಳಿದವರಲ್ಲ. ಅಜಾಮಿಳ ರತ್ನಾಕರ ಪಾಪಿಗಳು, ದುರ್ಮಾರ್ಗಿಗಳಾಗಿದ್ದರು. ಕಬೀರ್, ನಾನಕ್, ತುಕಾರಾಂ ಇವರಿಗೆ ಪುಸ್ತಕ ಪಾಂಡಿತ್ಯವಿರಲಿಲ್ಲ.

ಭಗವಂತನಲ್ಲಿ ಪ್ರೀತಿಯೊಂದಿದ್ದರೆ ಸಾಕು ಅದೇ ಎಲ್ಲವನ್ನು ಸಾಧಿಸಿ ಕೊಡುತ್ತದೆ ಎಂಬುದು ಭಕ್ತಿಮಾರ್ಗದ ಸಂದೇಶ. **(ಮುಂದುವರಿಯುವುದು...)**


॥ ಜೈ ಗುರುದೇವ್ ॥

**ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,**



(ರಿ.ನಂ. ಎಡಿಆರ್‌ಪಿ; ಎಸ್9:88 ಆರ್‌ಜಿಎನ್ 520/2010–11)

ಪ್ರಧಾನ ಕಛೇರಿ: ಶ್ರೀ ಗುರುದೇವದತ್ತ ಸಂಸ್ಥಾನಮ್, ಒಡಿಯೂರು

ಅಂಚೆ: ಒಡಿಯೂರು–574 243, ಬಂಟ್ವಾಳ ತಾಲೂಕು, (ದ.ಕ.)

✆: 08255–266950/9845144644

ಆಡಳಿತ ಕಛೇರಿ: ಶ್ರೀ ಭಗವತೀ ಸಂಕೀರ್ಣ, ಗರೋಡಿ, ಪಂಪುವೆಲ್ ಮಂಗಳೂರು

ನಿರಖು ಠೇವಣಿದಾರರಿಗೆ ವಿಶೇಷ ಬಡ್ಡಿಯನ್ನು ನೀಡಲಾಗುವುದು.

ಬಡ್ಡಿದರ ಈ ಕೆಳಗಿನಂತಿದೆ:

| | |
|---|---|
| 1ವರ್ಷದಿಂದ 2ವರ್ಷಗಳವರೆಗೆ | 9.5 % |
| 2ವರ್ಷದಿಂದ 3ವರ್ಷಗಳವರೆಗೆ | 10 % |
| 3ವರ್ಷದಿಂದ ಮೇಲ್ಪಟ್ಟು | 9 % |
| ಹಿರಿಯ ನಾಗರಿಕರಿಗೆ ಹಾಗೂ ಸಂಘ–ಸಂಸ್ಥೆಗಳಿಗೆ 0.5% ಹೆಚ್ಚಿನ ಬಡ್ಡಿದರವನ್ನು ನೀಡಲಾಗುವುದು. | |

**ನಮ್ಮಲ್ಲಿ ವಿವಿಧ ರೀತಿಯ ಸಾಲಗಳನ್ನು ನೀಡಲಾಗುವುದು.**

ವಿಶೇಷ ಸೌಲಭ್ಯ: ಶ್ರೀಮಧುರ ನಗದು ಪತ್ರ – 7.5 ವರ್ಷಗಳಲ್ಲಿ ದ್ವಿಗುಣಗೊಳ್ಳುತ್ತದೆ.

**"ಸಹಕಾರಿಯನ್ನು ಸಾಕಾರಗೊಳಿಸಿ; ಯಶದತ್ತ ಸಾಗಿಸಿ"**






# ಸ್ತ್ರೀಯ ಆಭರಣ–ಅಲಂಕಾರಗಳ ವೈಜ್ಞಾನಿಕ ಹಿನ್ನಲೆ

● ಯು.ಎನ್. ಸಂಗನಾಳಮಠ
ಹೊನ್ನಾಳಿ, ದಾವಣಗೆರೆ

'ಸ್ತ್ರೀ' ಧರಿಸುವ ಒಂದೊಂದು ಆಭರಣಗಳು ಸೌಭಾಗ್ಯದ ಪ್ರತೀಕವಾದರೆ ಇವುಗಳಿಗೆ ಅಧ್ಯಾತ್ಮಿಕ, ಆರೋಗ್ಯಕ್ಕೆ ಸಂಬಂಧಿಸಿದ ಹಿನ್ನಲೆ ಇದೆ. ಸ್ತ್ರೀಯನ್ನು ಮಾತೃ ಸ್ವರೂಪದಲ್ಲಿ ನೋಡುತ್ತೇವೆ. ಸ್ತ್ರೀಯು ಎರಡು ಮನೆಗಳನ್ನು ಬೆಳಗುತ್ತಾಳೆ. ಒಂದು ತಾನು ಜನಿಸಿದ ಮನೆ, ಇನ್ನೊಂದು ಮದುವೆ ಆಗಿ ಹೋದ ಮನೆ. ತಾಯಿ ಗರ್ಭದಲ್ಲಿ 9ತಿಂಗಳು ಶಿಶುವನ್ನು ಪೋಷಿಸಿಕೊಂಡು ದೈಹಿಕ, ಮಾನಸಿಕ ನೋವನ್ನು ಅನುಭವಿಸಿ ಈ ಪ್ರಪಂಚವನ್ನು ತೋರಿಸುತ್ತಾಳೆ. ಮುತ್ತೈದೆಯರು ಧರಿಸುವ ಒಂದೊಂದು ಆಭರಣದ ಹಿಂದೆ ವೈಜ್ಞಾನಿಕ, ಆಧ್ಯಾತ್ಮಿಕ ಹಿನ್ನಲೆ ಇದೆ. ಮುಖ್ಯವಾಗಿ ಈ ಅಲಂಕಾರ, ಆಭರಣಗಳು ದೇಹದಲ್ಲಿಯ ಎಂಟು ಚಕ್ರಗಳ (ಸಹಸ್ರಾರ, ಆಜ್ಞಾ, ಹೃದಯ, ಆನಂದ, ಗುಲ್ಮ, ನಾಭಿ, ಲಿಂಗ, ಮೂಲಾಧಾರ) ಮೇಲೆ ಪರಿಣಾಮ ಬೀರುತ್ತದೆ.

**1. ಮಾಂಗಲ್ಯದ ಕರಿಮಣಿಗಳು:**

ಇವು ದುಷ್ಟಶಕ್ತಿಗಳನ್ನು ದೂರಮಾಡಿ ರಕ್ಷಣೆ ನೀಡುತ್ತವೆ. ಅಲ್ಲದೆ ಪತ್ನಿ ಪತಿಯರೊಡನೆಯ ಸಂಬಂಧದಲ್ಲಿ ಯಾವುದೇ ಅಡೆತಡೆಗಳನ್ನುಂಟು ಮಾಡುವುದಿಲ್ಲ. ಎದೆಯ ಭಾಗದ ಉಷ್ಣತೆಯನ್ನು ಹೀರುತ್ತವೆ. ಹೃದಯದ ಮಧ್ಯಭಾಗದ ಅನಾಹತ ಚಕ್ರ, ಕತ್ತಿನ ಸುಷುಮ್ನಾ ನಾಡಿ, ಕತ್ತಿನ ಹಿಂಭಾಗದ ವಿಶುದ್ಧ ಚಕ್ರಗಳ ಮೇಲೆ ಕರಿಮಣಿ ಸರ ಇರುವುದರಿಂದ ಎದೆ ಮತ್ತು ಕತ್ತಿನ ತೊಂದರೆ ಹೋಗಲಾಡಿವುದು.

**2. ಮೂಗುತಿ:**

ಉದ್ರೇಕವಾದಾಗ ಶರೀರದಲ್ಲಿ ಉಷ್ಣತೆ ಹೆಚ್ಚಾಗುತ್ತದೆ. ಉಸಿರಾಡುವಾಗ ಗಾಳಿಯಲ್ಲಿರುವ ಉಷ್ಣತೆಯನ್ನು ನೋಡಿ ಒಳಗೆ ತೆಗೆದುಕೊಳ್ಳುವಾಗ ಸಹಾಯಕಾರಿಯಾಗುತ್ತದೆ. ಸುಷುಮ್ನ ನಾಡಿ ಆಧ್ಯಾತ್ಮಿಕ ಶಕ್ತಿ ಹೆಚ್ಚಿಸುತ್ತದೆ. ವಜ್ರದ ಮೂಗುತಿ ಧರಿಸುವುದರಿಂದ ದೇಹದ ಉಷ್ಣತೆಯನ್ನು ಸಮತೋಲನದಲ್ಲಿ ಇಡುತ್ತದೆ.

**3. ಓಲೆ:**

ಆತಂಕ, ಗಾಬರಿ ಆದಾಗ ಉಷ್ಣತೆ ಹೆಚ್ಚಿದಾಗ ನಿಯಂತ್ರಣಗೊಳಿಸುತ್ತವೆ. ಎತ್ತರವಾದ, ಜೋರಾದ ಸಪ್ಪಳ ಕೇಳಿದಾಗ ಕಂಪನದಿಂದ ತೊಂದರೆ ಆಗದಂತೆ ರಕ್ಷಿಸುತ್ತವೆ.

**4. ಬಳೆಗಳು:**

ಹಿಂದೂ ಸ್ತ್ರೀಯರ ಅತಿ ಅವಶ್ಯಕವಾದ ಸಾಧನ ಬಳೆಗಳು. ಇದಕ್ಕೆ ಮತ, ವಯಸ್ಸು, ವೈವಾಹಿಕ ಅಂತರವಿಲ್ಲ. ಹಸಿರು ಬಳೆಗಳು ಶ್ರೇಷ್ಠ. ನವವಿವಾಹಿತೆ ಮದುವೆಯಲ್ಲಿ ಹಾಕಿದ ಬಳೆಗಳನ್ನು ಆರು ತಿಂಗಳ ತೆಗೆಯುವುದಿಲ್ಲ. ಈಗ ಗಾಜಿನ ಬಳೆಗಳ ಜೊತೆ ಮೆಟಲ್, ಪ್ಲಾಸ್ಟಿಕ್ ಬಳೆಗಳೂ ಬಂದಿವೆ. ಬಂಗಾರದ ಬಳೆಗಳನ್ನು ವಿಶೇಷ ಸಂದರ್ಭಗಳಲ್ಲಿ ಬಳಸುತ್ತಾರೆ.

**5. ಕಾಲುಂಗುರ:**

ವಿವಾಹಿತರ ಚಿಹ್ನೆ ಕಾಲಿನ ನಡು ಬೆರಳಿನ ಮೇಲಿರುವ ನರಕ್ಕೂ ಮಹಿಳೆಯ ಗರ್ಭಾಶಯಕ್ಕೂ ನೇರ ಸಂಪರ್ಕ ಇರುವುದರಿಂದ ಗರ್ಭಸ್ರಾವ ಆಗದಿರಲಿ ಎಂದು ಕಾಲುಂಗುರವನ್ನು ಧರಿಸುತ್ತಾರೆ. ಇದನ್ನು ಬೆಳ್ಳಿ, ಪಂಚಲೋಹದಿಂದ ಮಾಡಿರುತ್ತಾರೆ. ಮೂಲಾಧಾರ ಚಕ್ರದ ಕುಂಡಲಿನಿ ಶಕ್ತಿಗೂ, ಸಹಸ್ರಾರ ಚಕ್ರದ ಸುಷುಮ್ನ ನಾಡಿಗೂ ಸಂಬಂಧ ಇರುವುದರಿಂದ ಸ್ತ್ರೀ ಶರೀರದ ಚೈತನ್ಯ ಮೇಲಿನಿಂದ ಕೆಳಗಿನವರೆಗೂ ಹರಿಯಲು ಕಾಲುಂಗುರ ಸಹಾಯಕಾರಿಯಾಗುತ್ತದೆ.

**6. ಕುಂಕುಮ:**

ಎರಡು ಹುಬ್ಬುಗಳ ಮಧ್ಯ ಭಾಗದಲ್ಲಿರುವ ಆಜ್ಞಾಚಕ್ರದ ಮೇಲೆ ಕುಂಕುಮ ಧರಿಸಬೇಕು. ಈ ಚಕ್ರದಿಂದ ಇನ್ನೊಬ್ಬರನ್ನು ಆಕರ್ಷಿಸಬಹುದು. ಇದನ್ನು ಕುಂಕುಮ ತಡೆಗಟ್ಟುತ್ತದೆ. ಪರಪುರುಷರ ಕಾಮದೃಷ್ಟಿಗೂ ತಡೆ ಮಾಡುತ್ತದೆ. ಕೆಂಪು ಸಿಂಧೂರ ವಿವಾಹಿತೆಯ ಚಿಹ್ನೆ. ಸ್ತ್ರೀಯರ ಋತುಚಕ್ರದ ಚಿಹ್ನೆ. ಸಂತಾನೋತ್ಪತ್ತಿಯ ಸಂಕೇತ ಎನ್ನುತ್ತಾರೆ.

ಕುಂಕುಮವನ್ನು ಅರಸಿನ, ಲಿಂಬೆ ಹಣ್ಣು, ಸುಣ್ಣದಿಂದ ಮಾಡಿರುತ್ತಾರೆ. ಅರಶಿನ ಚರ್ಮರೊಗ ತಡೆಗಟ್ಟುವುದು. ಲಿಂಬೆಹಣ್ಣು ಚರ್ಮಕ್ಕೆ ಕಾಂತಿ ಕೊಡುವುದು. ಸುಣ್ಣ ಎಲುಬಿಗೆ ಕ್ಯಾಲ್ಸಿಯಂ ಒದಗಿಸುವುದು. ಈಗ ಅಸಂಖ್ಯಾತ





ವಿವಿಧ ನಮೂನೆಯ ಬಿಂದಿಗಳು, ಸ್ಟಿಕ್ಕರುಗಳು ಬಂದಿವೆ. ಧರಿಸುವ ವಸ್ತ್ರಗಳಿಗೆ ಮ್ಯಾಚ್ ಆಗುವ ಬಿಂದಿಗಳು ಬಂದಿವೆ ಅವಿವಾಹಿತರು ಧರಿಸುತ್ತಾರೆ.

ಸ್ತ್ರೀ ಪುರುಷರಾದಿಯೂ ಕುಂಕುಮ ಧರಿಸಬಹುದು. ಅದರ ಆಧ್ಯಾತ್ಮಿಕ ಹಿನ್ನಲೆ ಹೀಗಿದೆ. – ನಮ್ಮ ದೇಹದಲ್ಲಿ ಷಡ್ ಚಕ್ರಗಳಿವೆ. (ಆಜ್ಞಾ, ವಿಶುದ್ಧ, ಅನಾಹತ, ಮಣಿಪೂರ, ಸ್ವಾದಿಷ್ಠಾನ, ಮೂಲಾಧಾರ) ಭ್ರೂಮಧ್ಯದಲ್ಲಿ ಆಜ್ಞಾಚಕ್ರವಿರುವುದರಿಂದ ಕುಂಕುಮ ಇಡುವುದರಿಂದ ಜಾಗೃತವಾಗುವುದು. ಬೆನ್ನು ಹುರಿಯ ಸ್ಥಳದಲ್ಲಿ ಮೂರು ನಾಡಿಗಳಿವೆ. (ನಾಡಿಗಳು ಚಕ್ರಗಳ ಶಕ್ತಿ ವಾಹಕಗಳು) ಬೆನ್ನು ಹುರಿಯ ಮಧ್ಯದಲ್ಲಿರುವ ಸುಷುಮ್ನ ನಾಡಿ, ಅಕ್ಕಪಕ್ಕದಲ್ಲಿ ಇಡಾ, ಪಿಂಗಳ ನಾಡಿಗಳಿವೆ. (ಇಡಾ, ಪಿಂಗಳ ನಾಡಿಗಳು ಕಾಶಿ ಕ್ಷೇತ್ರದ ವಾರಣ, ಅಸಿ ಎರಡು ನದಿಗಳನ್ನು ಪ್ರತಿನಿಧಿಸುತ್ತವೆ) ಎವೆರಡೂ ಸುಷುಮ್ನ ನಾಡಿಯೊಂದಿಗೆ ಕೂಡಿ ಆಜ್ಞಾಚಕ್ರಕ್ಕೆ ಸೇರುತ್ತದೆ. ಅದಕ್ಕೆ ಭ್ರೂಮಧ್ಯ ಕುಂಕುಮ ಇಡುವುದರಿಂದ ನಿಯಂತ್ರಣ, ಆನಂದ ಲಭಿಸುತ್ತದೆ.

**7. ಅರಶಿಣ:**

ಚರ್ಮದ ರೋಗಗಳನ್ನು ತಡೆಗಟ್ಟುತ್ತವೆ. ಚರ್ಮಕ್ಕೆ ಕಾಂತಿ ಈಡುತ್ತದೆ. ಮೊಡವೆಗಳು ಬಾರದ ಹಾಗೆ ರಕ್ಷಿಸುತ್ತದೆ. ಇದು ಆ್ಯಂಟಿ ಸೆಪ್ಟಿಕ್ ರೀತಿ ಕಾರ್ಯನಿರ್ವಹಿಸುತ್ತದೆ.

**8. ಬೈತಲೆ:**

ಸ್ತ್ರೀಯರು ಮಧ್ಯಭಾಗದಲ್ಲಿ ಬೈತಲೆ ತೆಗೆಯುವುದರಿಂದ ಉಷ್ಣತೆಯನ್ನು ಸಮಾನಾಗಿ ಇಡುತ್ತದೆ. ಉದ್ದನೆ ಕೂದಲು ಇದ್ದರೆ ಬೆನ್ನುಹುರಿಯನ್ನು ರಕ್ಷಿಸುತ್ತದೆ. ಜಡೆಯಲ್ಲಿ 3 ಭಾಗ ಇರುತ್ತದೆ. (ಗಂಗಾ, ಯಮುನಾ, ಸರಸ್ವತಿ) ಜಡೆ ಹೆಣೆದಾಗ ಎರಡು ಮಾತ್ರ ಕಾಣುತ್ತವೆ. ಗಂಗಾ, ಯಮುನಾ ಕಾಣುತ್ತವೆ. ಸರಸ್ವತಿ ಕಾಣುವುದಿಲ್ಲ. ಗುಪ್ತಗಾಮಿನಿ.

************

**“ಐಶ್ವರ್ಯ ಇದ್ದವರಿಗೂ ಹತ್ತಾರು ಚಿಂತೆಗಳು. ಇಲ್ಲದವರಿಗೂ ಹತ್ತಾರು ಚಿಂತೆಗಳು. ಇದು ಸ್ವಾಭಾವಿಕ; ಆದರೆ ಇವುಗಳ ಪರಿಹಾರಕ್ಕೆ ಭಗವಂತನ ಚಿಂತನೆಯೊಂದೇ ಸುಲಭ ಮಾರ್ಗ.”**

**– ಒಡಿಯೂರು ಶ್ರೀ**

## ಪೂಜ್ಯ ಶ್ರೀಗಳವರು ಪುಣೆ-ಅಹಮದ್‌ನಗರಕ್ಕೆ

ತಾ.18-11-2019ರಿಂದ 22-11-2019ರ ತನಕ ಪೂಜ್ಯ ಶ್ರೀಗಳವರು **ಒಡಿಯೂರು ಶ್ರೀ ಗುರುದೇವ ಸೇವಾ ಬಳಗ ಮತ್ತು ಒಡಿಯೂರು ಶ್ರೀ ವಜ್ರಮಾತಾ ಮಹಿಳಾವಿಕಾಸ ಕೇಂದ್ರ, ಪುಣೆ ಘಟಕವು** ಆಯೋಜಿಸುವ ಹಲವು ಕಾರ್ಯಕ್ರಮಗಳಲ್ಲಿ ದಿವ್ಯ ಉಪಸ್ಥಿತಿಯನ್ನು ಕರುಣಿಸಿ ಆಶೀರ್ವಚನಗೈಯಲ್ಲಿದ್ದಾರೆ.

ತಾ.18-11-2019ರಂದು ಸಂಜೆ ಪೂಜ್ಯ ಶ್ರೀಗಳವರ ದಿವ್ಯ ಉಪಸ್ಥಿತಿಯಲ್ಲಿ ಪುಣೆ ಮಹಾನಗರದಲ್ಲಿ ಬಳಗದ **ವಾರ್ಷಿಕೋತ್ಸವ-ಗುರುವಂದನಾ ಕಾರ್ಯಕ್ರಮ** ನಡೆಯಲಿರುವುದು.

ಪುಣೆ ಕಾರ್ಯಕ್ರಮದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ನಂಬ್ರ:

**ಶ್ರೀ ಸದಾನಂದ ಕೆ. ಶೆಟ್ಟಿ, (ಅಧ್ಯಕ್ಷರು) - 9823055076**

**ಶ್ರೀ ರೋಹಿತ್ ಡಿ. ಶೆಟ್ಟಿ ನಗ್ರಿಗುತ್ತು, (ಪ್ರಧಾನ ಕಾರ್ಯದರ್ಶಿ)-9960337625**

**ಶ್ರೀ ಹರೀಶ್ ಮೂಡುಬಿದ್ರೆ (ಕಾರ್ಯದರ್ಶಿ) - 9422021141**

॥ ಜೈ ಗುರುದೇವ್ ॥

## ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್

## ಕೃತಜ್ಞತೆಗಳು

ತಾ.02-10-2019ನೇ ಬುಧವಾರ ಶ್ರೀ ಸಂಸ್ಥಾನದಲ್ಲಿ ಜರಗಿದ '**ಶ್ರೀ ಲಲಿತಾ ಪಂಚಮಿ ಮಹೋತ್ಸವ-ಶ್ರೀ ಚಂಡಿಕಾ ಯಾಗ ಹಾಗೂ ಶ್ರೀ ಹನುಮಗಂಗಾ ಪುಷ್ಕರಿಣಿ ಸಮರ್ಪಣಾ ಸಮಾರಂಭ**ವನ್ನು ಯಶಸ್ವಿಗೊಳಿಸಲು ಕಾರಣಕರ್ತರಾದ ಶ್ರೀ ಗುರುದೇವ ಸೇವಾ ಬಳಗ ಹಾಗೂ ಶ್ರೀ ವಜ್ರಮಾತಾ ಮಹಿಳಾವಿಕಾಸ ಕೇಂದ್ರದ ಎಲ್ಲಾ ಘಟಕಗಳ ಸರ್ವಸದಸ್ಯರಿಗೆ, ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆಯ ಎಲ್ಲಾ ಬಂಧುಗಳಿಗೆ, ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಆಡಳಿತ ಮಂಡಳಿ, ಸಿಬ್ಬಂದಿಗಳಿಗೆ, ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದ ಶಿಕ್ಷಕ ವೃಂದ-ವಿದ್ಯಾರ್ಥಿಗಳಿಗೆ, ಒಡಿಯೂರು ಶ್ರೀ ಗುರುದೇವ ಐ.ಟಿ.ಐ.ನ ಉಪನ್ಯಾಸಕ ವೃಂದ ಹಾಗೂ ವಿದ್ಯಾರ್ಥಿಗಳಿಗೆ, ಯಜ್ಞದ ಪೋಷಕರಾಗಿ ಸಹಕರಿಸಿದ ಊರ-ಪರವೂರಿನ ಗುರುಭಕ್ತರಿಗೆ, ಸೇವಾರ್ಥಿಗಳಾಗಿ ಸಹಕರಿಸಿದವರಿಗೆ ಶ್ರೀ ಸಂಸ್ಥಾನವು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತದೆ.

**ಕಾರ್ಯನಿರ್ವಾಹಕರು, ಒಡಿಯೂರು ಶ್ರೀ ಸಂಸ್ಥಾನಮ್**





## ಪದಪ್ರಕಾಶ

● ಶ್ರೀಮತಿ ನಳಿನಿ ಜಿ.ಭಟ್, ಸೇರಾಜೆ

ಇಲ್ಲಿರುವ ಪದಗಳ ಅಕ್ಷರಗಳನ್ನು ಅಸ್ತವ್ಯಸ್ತವಾಗಿ ಮಾಡಿದೆ. ಅರ್ಥವತ್ತಾಗಿ ಜೋಡಿಸಿ ಗುರುತು ಮಾಡಿದ ಕೋಣೆಯ ಅಕ್ಷರಗಳನ್ನು ತೆಗೆದು ಕೊನೆಯ ಸಾಲಿನ ಕೋಣೆಗೆ ತುಂಬಿಸಿ ಹೊಸ ಪದವನ್ನು ಪಡೆಯಬಹುದು. ಪ್ರಯತ್ನಿಸಿ, ಉತ್ತರವನ್ನು ಕಳುಹಿಸಿ.

ರಿ ಮಾ ಕ ಕು ನ್ಯಾ

ತೆ ಕು ಮ ದ ನ ವ್ಯಾ ಲ

ಣ ಶ್ರಾ ಸ ವ ಮಾ

ಸ ಮ ಶು ಯ ಭ

ಳು ಲ ರು ತ ತೆ ಗ

ತ ಧಾ ಭಾ ವಿ ಗ್ಯ

ಳಾ ಮಂ ತಿ ಗ ರ

ಣ ರ ರು ಅ ಣ ಕಿ

**ಹೊಸಪದ:**

### ಕಳೆದ ಸಂಚಿಕೆಯ ಸರಿ ಉತ್ತರ

ಪ ನ್ನ ಗ ಶ ಯ ನ

ಕ ರ ವೀ ರ ಹೂ ವು

ನೀ ಳ ನಾ ಸಿ ಕ

ರ ಮಾ ರ ಮ ಣ

ಎ ದು ರು ಮ ನೆ

ಅ ರ ಗಿ ನ ಮ ನೆ

ಕ ನ ಸಿ ನ ಲೋ ಕ

ಮಂ ಗ ಳಾ ರ ತಿ

ಕ ರಾ ರು ಪ ತ್ರ

ಉ ತ್ತ ರಾ ಯ ಣ ಕಾ ಲ

**ಹೊಸಪದ:** ಗ ದು ಗಿ ನ ವೀ ರ ನಾ ರಾ ಯ ಣ

## ಸಂಸ್ಥಾನ ವಾರ್ತೆ

### "ಮಕ್ಕಳನ್ನು ಸಂಸ್ಕೃತಿಯ ಹರಿಕಾರರನ್ನಾಗಿಸಬೇಕು" ಮುದ್ದುಕೃಷ್ಣ ವೇಷ ಸ್ಪರ್ಧೆ ಉದ್ಘಾಟಿಸಿ ಒಡಿಯೂರು ಶ್ರೀ

**ಆ.25:** "ಅರಿಷಡ್ವೈರಿಗಳನ್ನು ಶೂನ್ಯಗೊಳಿಸಿದಾಗ ಭಗವಂತನ ಕೈಸೇರುವ ಕೊಳಲು ನಾವಾಗುತ್ತೇವೆ; ಪರಿಶುದ್ಧವಾದ ಬೆಣ್ಣೆಯೂ ನಾವಾಗಬಹುದು. ಕೃಷ್ಣ ಸಂಸ್ಕೃತಿಯ ದ್ಯೋತಕ. ಸಂಸ್ಕೃತಿಯ ಬೆಳಕು ರಾಮ ಮತ್ತು ಕೃಷ್ಣರು. ಮಕ್ಕಳನ್ನು ಸಂಸ್ಕೃತಿಯ ಉಳಿವಿನ ಹರಿಕಾರರಾಗಿ ಬೆಳೆಸಬೇಕು. ಆ ಮೂಲಕ ಭವ್ಯ ಭಾರತ ನಿರ್ಮಾಣದ ಭವಿಷ್ಯ ಬರೆಯುವಂತಾಗಬೇಕು." ಎಂದು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು ಒಡಿಯೂರು ಶ್ರೀ ಗುರುದೇವ ಜ್ಞಾನಮಂದಿರದಲ್ಲಿ ಜೈ ಗುರುದೇವ ಕಲಾಕೇಂದ್ರ, ಒಡಿಯೂರು ಆಯೋಜಿಸಿದ್ದ ಮುದ್ದುಕೃಷ್ಣ ವೇಷ ಸ್ಪರ್ಧೆಯನ್ನು ಉದ್ಘಾಟಿಸಿ ಆಶೀರ್ವಚನಗೈದರು.

ಸಾಧ್ವಿ ಶ್ರೀ ಮಾತಾನಂದಮಯಿಯವರು ಉಪಸ್ಥಿತರಿದ್ದರು. ಶ್ರೀ ಯಶವಂತ್ ವಿಟ್ಲ ಹಾಗೂ ಶ್ರೀ ಕಿರಣ್ ಆರ್ಟಿಸ್ಟ್ ತೀರ್ಪುಗಾರರಾಗಿ ಸಹಕರಿಸಿದರು. ಕಲಾಕೇಂದ್ರದ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯ ಒಡಿಯೂರು ಸ್ವಾಗತಿಸಿ, ಕಾರ್ಯದರ್ಶಿ ಶ್ರೀ ಸುಖೇಶ್ ಭಂಡಾರಿ ವಂದಿಸಿದರು. ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆಯ ಬಂಟ್ವಾಳ ಮೇಲ್ವಿಚಾರಕ ಶ್ರೀ ಸದಾಶಿವ ಅಳಿಕೆ ಕಾರ್ಯಕ್ರಮ ನಿರೂಪಿಸಿದರು.

### ಒಡಿಯೂರು ಶ್ರೀ ಗುರುದೇವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆ – ಪ್ರವೇಶೋತ್ಸವ ಮತ್ತು ಬೀಳ್ಕೊಡುಗೆ ಸಮಾರಂಭ

"ಬದುಕನ್ನು ನಾವು ಪ್ರೀತಿಸಬೇಕು; ಆಗ ಬದುಕು ನಮ್ಮನ್ನು ಪ್ರೀತಿಸುತ್ತದೆ. ಈ ಬಗ್ಗೆ ಚಿಂತನೆ ಮಾಡಿದರೆ ಆದರ್ಶ ಬದುಕು ನಮ್ಮದಾಗುತ್ತದೆ. ವಿದ್ಯೆಯೆ ಶ್ರೇಷ್ಠವಾದ ಸಂಪತ್ತು. ವಿದ್ಯೆಯೊಂದಿಗೆ ವಿನಯವು ಮನೆ ಮಾಡಿರಬೇಕು. ಬದುಕು ಕೌಶಲ್ಯಯುತವಾಗಿದ್ದು, 'ಸ್ಕಿಲ್' ಎಂಬುದು 'ಸ್ಪಿಲ್' ಆಗಿರದೆ ನಿರಂತರತೆಯಿಂದರಲಿ. ವಿದ್ಯಾರ್ಥಿಗಳು ದುಶ್ಚಟಕ್ಕೆ ಬಲಿಯಾಗದೆ ಆದರ್ಶ ವಾಗಿರಬೇಕು" ಎಂದು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ





ಸ್ವಾಮಿಗಳವರು ಒಡಿಯೂರು ಶ್ರೀ ಗುರುದೇವ ಐ.ಟಿ.ಐ.ನ 2019–20ನೇ ಸಾಲಿನ ಪ್ರವೇಶೋತ್ಸವ ಮತ್ತು ಬೀಳ್ಕೊಡುಗೆ ಸಮಾರಂಭದಲ್ಲಿ ಆಶೀರ್ವಚನಗೈದರು.

ಸಾಧ್ವಿ ಶ್ರೀ ಮಾತಾನಂದಮಯಿಯವರು "ವ್ಯಕ್ತಿ ಸರಿಯಾಗಿ ಸಂಸ್ಕಾರಯುತ ಪ್ರಾಮಾಣಿಕತೆಯ ವ್ಯಕ್ತಿತ್ವವನ್ನು ಬೆಳೆಸಿಕೊಂಡರೆ ಅದು ರಾಷ್ಟ್ರದ ಸಂಪತ್ತಾಗುತ್ತದೆ. ಉತ್ತಮ ನಡವಳಿಕೆಗಳನ್ನು ಜೀವನದಲ್ಲಿ ಅಳವಡಿಸಿದಾಗ ತನ್ನಿಂದ ತಾನೆ ಸಮೃದ್ಧ ಸಮಾಜ ನಿರ್ಮಾಣವಾಗುತ್ತದೆ. ಯಾಂತ್ರಿಕ ಯುಗಕ್ಕೆ ನಮ್ಮ ಬದುಕನ್ನು ಹೊಂದಿಕೊಂಡು ಜೀವಿಸುವುದು ಅನಿವಾರ್ಯವಾಗಿದೆ" ಎಂದು ಆಶೀರ್ವಚನಗೈದು ಐ.ಟಿ.ಟಿ.ಯ ಪ್ರಾಂಶುಪಾಲರು, ತರಬೇತುದಾರರ ಕ್ರಿಯಾಶೀಲ ಮತ್ತು ಶ್ರದ್ಧೆಯ ಸೇವೆಯನ್ನು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ಕರೋಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಬೇಬಿ ಆರ್.ಶೆಟ್ಟಿ, ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಲ॥ ಎ. ಸುರೇಶ್ ರೈ, ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದ ಸಂಚಾಲಕರಾದ ಶ್ರೀ ಗಣಪತಿ ಭಟ್ ಸೇರಾಜೆ, ಮುಖ್ಯೋಪಾಧ್ಯಾಯರಾದ ಶ್ರೀ ಎ. ಜಯಪ್ರಕಾಶ ಶೆಟ್ಟಿ, ಹಿರಿಯ ಪತ್ರಕರ್ತರಾದ ಶ್ರೀ ಯಶವಂತ ವಿಟ್ಲ, ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕ ಶ್ರೀ ಲಿಂಗಪ್ಪ ಗೌಡ ಪನೆಯಡ್ಕ, ಶ್ರೀ ಸಂಸ್ಥಾನದ ಕಾರ್ಯನಿರ್ವಾಹಕರ ಶ್ರೀ ಪದ್ಮನಾಭ ಒಡಿಯೂರು ಮುಂತಾದವರು ಉಪಸ್ಥಿತರಿದ್ದರು.

ಸಂಸ್ಥೆಯಲ್ಲಿ ತರಬೇತು ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವನ್ನು ಪೂಜ್ಯ ಶ್ರೀಗಳವರು ವಿತರಿಸಿದರು. ಐ.ಟಿ.ಐ.ಯ ದ್ವಿತೀಯ ವರ್ಷದ ವಿದ್ಯಾರ್ಥಿಗಳು ನೂತನವಾಗಿ ಪ್ರವೇಶಪಡೆದ ವಿದ್ಯಾರ್ಥಿಗಳಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಕರುಣಾಕರ ಎನ್.ಬಿ. ಪ್ರಸ್ತಾವನೆಗೈದು, ಸಿಬ್ಬಂದಿ ಶ್ರೀ ಮೋಹನ್ ಸ್ವಾಗತಿಸಿದರು, ಶ್ರೀ ಪ್ರವೀಣ್ ಕುಮಾರ್ ವಂದಿಸಿದರು. ಶ್ರೀ ಜಯಂತ ಆಜೇರುರವರು ಕಾರ್ಯಕ್ರಮ ನಿರೂಪಿಸಿದರು.

---

**"ಲೌಕಿಕ ಬದುಕಿನಲ್ಲಿಯೇ ಮುಳುಗಿರುವವರು ಅಲೌಕಿಕ ಬದುಕಿನ ಮಹತ್ವವನ್ನೂ ಅರಿತಿರಬೇಕು. ಆಧ್ಯಾತ್ಮಿಕ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು."**

## "ಪರಿಶ್ರಮದಿಂದ ಯಶಸ್ಸು ಸಾಧ್ಯ"
## ಒಡಿಯೂರು ಐ.ಟಿ.ಐ.ಯಲ್ಲಿ ಇಂಜಿನಿಯರ್ಸ್ ಡೇ ಆಚರಣೆಯಲ್ಲಿ
## ಒಡಿಯೂರು ಶ್ರೀ ಆಶೀರ್ವಚನ

**ಸೆ.19:** "ವಿಜ್ಞಾನದಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿರುವುದು ಸಹಜ. ವಿಜ್ಞಾನದಲ್ಲಿ ಪರಿಶ್ರಮದಿಂದ ಯಶಸ್ಸನ್ನು ಕಾಣಲು ಸಾಧ್ಯ. ಹಾಗೆಯೇ ದಕ್ಷತೆ, ಶಿಸ್ತನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕಿನಲ್ಲಿ ನಾವು ಯಶಸ್ಸನ್ನು ಕಾಣಬಹುದು. ಆ ಮೂಲಕ ಸಮಾಜದಲ್ಲಿ ಉನ್ನತ ಮಟ್ಟಕ್ಕೇರಬಹುದು. ಬದುಕಿನ ಪ್ರತಿಯೊಂದು ಕ್ಷಣವು ನಮಗೆ ಪಾಠವಾಗಿರುತ್ತದೆ. ಗುಣಮಟ್ಟದ ಶಿಕ್ಷಣದಿಂದ ನಾವು ಹೆಚ್ಚು ಸಂಸ್ಕಾರವಂತರಾಗುತ್ತೇವೆ" ಎಂದು ಒಡಿಯೂರು ಶ್ರೀ ಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು ಆಶೀರ್ವಚನಗೈದರು.

ಒಡಿಯೂರು ಶ್ರೀ ಗುರುದೇವ ಐ.ಟಿ.ಐ.ಯಲ್ಲಿ ಆಯೋಜಿಸಲಾದ "ಇಂಜಿನಿಯರ್ಸ್ ಡೇ" ಕಾರ್ಯಕ್ರಮದಲ್ಲಿ ದೀಪೋಜ್ವಲನಗೈದು ಪೂಜ್ಯ ಶ್ರೀಗಳವರು ಸರ್। ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಇಂಜಿನಿಯರ್ಸ್ ಡೇಯ ಪ್ರಯುಕ್ತ ಏರ್ಪಡಿಸಲಾದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು.

ಮುಖ್ಯ ಅತಿಥಿಗಳಾದ ವಿಟ್ಲ ಲಯನ್ಸ್ ಕ್ಲಬ್‌ನ ಅಧ್ಯಕ್ಷ, ಸಿವಿಲ್ ಇಂಜಿನೀಯರ್ ಶೆಲ್ಟರ್ ಅಸೋಸಿಯೆಟ್ಸ್‌ನ ಪಾಲುದಾರ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಇವರು ಮಾತನಾಡಿ "ತಾಂತ್ರಿಕ ಕೈಗಾರಿಕಾ ತರಬೇತಿ ಸಂಸ್ಥೆ ಸ್ವಾವಲಂಬಿಯಾಗಿ ಬದುಕಲು ಸಹಕಾರಿಯಾಗಲಿ" ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮೆಸ್ಕಾಂ ಕನ್ಯಾನ ಶಾಖೆಯ ಶಾಖಾಧಿಕಾರಿ ಶ್ರೀ ಕಾರ್ತಿಕ್ ಸಿ.ಆರ್. ಅವರು ಮಾತನಾಡಿ ಸರ್। ಎಂ. ವಿಶ್ವೇಶ್ವರಯ್ಯನವರು ಇಂಜಿನಿಯರ್ ವಿಭಾಗದಲ್ಲಿ ಮಾಡಿದ ಸಾಧನೆ ಹಾಗೂ ದಿವಾನರಾಗಿದ್ದಾಗ ನಿರ್ವಹಿಸಿದ ಪ್ರಾಮಾಣಿಕ ಕರ್ತವ್ಯಗಳನ್ನು ವಿವರಿದರು. ಒಡಿಯೂರು ಶ್ರೀ ವಿವಿಧೊದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕ ಶ್ರೀ ಪಿ. ಲಿಂಗಪ್ಪ ಗೌಡ, ಒಡಿಯೂರು ಶ್ರೀ ವಜ್ರಮಾತಾ ಮಹಿಳಾವಿಕಾಸ ಕೇಂದ್ರದ ಅಧ್ಯಕ್ಷೆ ಶ್ರೀಮತಿ ಸರ್ವಾಣಿ ಪಿ. ಶೆಟ್ಟಿ ಉಪಸ್ಥಿತರಿದ್ದರು.





ಒಡಿಯೂರು ಶ್ರೀ ಗುರುದೇವ ಕೈಗಾರಿಕಾ ತರಬೇತಿ ಸಂಸ್ಥೆಯ ಕಿರಿಯ ತರಬೇತಿ ಅಧಿಕಾರಿ ಶ್ರೀ ಎಂ. ಅಶ್ವಥ್ ಅವರು, ಸರ್। ಎಂ. ವಿಶ್ವೇಶ್ವರಯ್ಯನವರ ಮಹಾನ್ ಸಾಧನೆಯ ಬಗ್ಗೆ ಮಾತನಾಡಿದರು.

ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಕರುಣಾಕರ ಎನ್.ಬಿ. ಸ್ವಾಗತಿಸಿದರು. ವಿದ್ಯಾರ್ಥಿ ಮಹಮ್ಮದ್ ಇರ್ಷಾದ್ ವಂದಿಸಿ, ಸಲ್ಮಾನ್ ಫಾರಿಸ್ ನಿರೂಪಿಸಿದರು. ಸಿಬ್ಬಂದಿಗಳು ಸಹಕರಿಸಿದರು.

## ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ 'ಉತ್ತಮ ಸೌಹಾರ್ದ ಸಹಕಾರಿ' ಪ್ರಶಸ್ತಿ

**ಒಡಿಯೂರು, ಸೆ.19:** ಕರ್ನಾಟಕ ರಾಜ್ಯದಲ್ಲಿರುವ 4500ಕ್ಕಿಂತಲೂ ಹೆಚ್ಚಿನ ಸೌಹಾರ್ದ ಸಹಕಾರಿಯಲ್ಲಿ ಅತ್ಯುತ್ತಮ ಮಾದರಿ ಸಹಕಾರಿಯಾಗಿ ಕಾರ್ಯನಿರ್ವಹಿಸಿದ ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾ-ರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ 'ಉತ್ತಮ ಸೌಹಾರ್ದ ಸಹಕಾರಿ' ಪ್ರಶಸ್ತಿಯನ್ನು ಘೋಷಿಸಿದೆ.

ಈ ಪ್ರಶಸ್ತಿಯನ್ನು ಬೆಂಗಳೂರಿನ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಸೆ. 18ರಂದು ಜರಗಿದ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 18ನೇ ಸಾಮಾನ್ಯ ಸಭೆಯ ವಿಶೇಷ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆ ಹಾಗೂ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಕೃಷ್ಣ ರೆಡ್ಡಿಯವರು ಪ್ರದಾನ ಮಾಡಿದರು. ಒಡಿಯೂರು ಸಹಕಾರಿಯ ಅಧ್ಯಕ್ಷ ಲ। ಎ. ಸುರೇಶ್ ರೈ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಉಗ್ಗಪ್ಪ ಶೆಟ್ಟಿ ಕೊಂಬಿಲ ಇವರು ಪ್ರಶಸ್ತಿ ಸ್ವೀಕರಿಸಿದರು. ಒಡಿಯೂರು ಸಹಕಾರಿಯ ನಿರ್ದೇಶಕರಾದ ಶ್ರೀ ಲಿಂಗಪ್ಪ ಗೌಡ ಪನೆಯಡ್ಕ, ಶ್ರೀ ದೇವಪ್ಪ ನೋಂಡ ಪುತ್ತೂರು, ಶ್ರೀ ತಾರಾನಾಥ ಶೆಟ್ಟಿ ಒಡಿಯೂರು, ශ್ರೀ ಗಣಪತಿ ಭಟ್ ಸೇರಾಜೆ ಜತೆಗಿದ್ದರು.

---

**"ತಾಳ್ಮೆಯೆಂಬುದು ಬದುಕಿನ ಸಾರ್ಥಕತೆಗೆ ಮೂಲ ಆಧಾರ. ಶ್ರದ್ಧೆ, ಶಿಸ್ತಿನೊಂದಿಗೆ ತಾಳ್ಮೆಯೂ ಮೈಗೂಡಿದರೆ, ಯಾವುದೇ ಕಾರ್ಯವೂ ಅಸಾಧ್ಯವಲ್ಲ, ತಾಳ್ಮೆಯೇ ಜೀವನದ ಯಶಸ್ಸಿನ ಮಾರ್ಗ." – ಒಡಿಯೂರು ಶ್ರೀ**

## "ಸನಾತನ ಸಂಸ್ಕೃತಿಯ ಉಳಿವಿನಿಂದ ಧರ್ಮದ ಪುನರುತ್ಥಾನ" ಒಡಿಯೂರು ಶ್ರೀಗಳು

**ಒಡಿಯೂರು, ಅ.2:** "ಕಲೆಯ ಆರಾಧನೆ ಅದು ದೇವಿಯ ಆರಾಧನೆಯಾಗಿದೆ. ನವರಾತ್ರಿಯಲ್ಲಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾ ಶಕ್ತಿಯ ಸಮ್ಮಿಳಿತವಾಗುತ್ತದೆ. ಕಲಾವಿದರನ್ನು ಒಟ್ಟಾಗಿಸಿದರೆ ಅದು ಒಂದೊಂದು ಮಣಿಯನ್ನು ದೇವರಿಗೆ ಸಮರ್ಪಿಸಿದ ಫಲವಾಗಿದೆ. ಮಕ್ಕಳನ್ನು ಸಂಸ್ಕೃತಿಯ ವಾರಿಸುದಾರರನ್ನಾಗಿಸಬೇಕು. ಆಸೆಯ ತ್ಯಾಗವೇ ಆನಂದದ ಮೂಲವಾಗಿದೆ. ಸನಾತನ ಸಂಸ್ಕೃತಿಯನ್ನು ಉಳಿಸಿದಾಗ ಧರ್ಮದ ಪುನರುತ್ಥಾನವಾಗಬಹುದು. ಸಮಾಜದ ಋಣ ಸಂತನಿಗೂ ಇದ್ದು, ಅದು ಸಂತರ ಕರ್ತವ್ಯವೂ ಆಗಿದೆ" ಎಂದು ಒಡಿಯೂರು ಶ್ರೀ ಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು ಆಶೀರ್ವಚನಗೈದರು.

ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದಲ್ಲಿ ಜರಗಿದ ಶ್ರೀ ಲಲಿತಾ ಪಂಚಮಿ ಮಹೋತ್ಸವ-ಶ್ರೀ ಚಂಡಿಕಾ ಮಹಾಯಾಗ ಹಾಗೂ ಶ್ರೀ ಹನುಮಗಂಗಾ ಪುಷ್ಕರಿಣಿಯ ಸಮರ್ಪಣೆಯ ಸಂದರ್ಭ ನಡೆದ ಧರ್ಮಸಭೆಯಲ್ಲಿ ಹಲವು ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಶ್ರೀ ಗುರುದೇವಾನುಗ್ರಹ ಪುರಸ್ಕಾರ ನೀಡಿ ಪೂಜ್ಯ ಶ್ರೀಗಳವರು ಸಂದೇಶ ನೀಡಿದರು.

ಸಾಧ್ವಿ ಶ್ರೀ ಮಾತಾನಂದಮಯೀಯವರು ಉಪಸ್ಥಿತರಿದ್ದು, ಮುಖ್ಯ ಅತಿಥಿಗಳಾಗಿ ಬಸವನಹಳ್ಳಿ ಪೊಲೀಸ್ ಠಾಣೆಯ ಠಾಣಾಧಿಕಾರಿ ಶ್ರೀಮತಿ ನಂದಿನಿ ಎಸ್. ಶೆಟ್ಟಿ ಭಾಗವಹಿಸಿ ಶುಭಹಾರೈಸಿದರು. ಒಡಿಯೂರು ಶ್ರೀ ವಿವಿಧೊದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಎ. ಸುರೇಶ್ ರೈ ಉಪಸ್ಥಿತರಿದ್ದರು. ವಿದುಷಿ ಸಾವಿತ್ರಿ ಈಶ್ವರ ಭಟ್, ಚಲನಚಿತ್ರ ನಟ, ರಂಗಭೂಮಿ ಕಲಾವಿದ ಶ್ರೀ ಕಾಸರಗೋಡು ಚಿನ್ನ, ಯಕ್ಷಗಾನ ಕಲಾವಿದ ಶ್ರೀ ಸೀತಾರಾಮ ಕುಮಾರ್ ಕಟೀಲು, ತುಳು ನಾಟಕ ನಿರ್ದೇಶಕ, ರಚನೆಗಾರ, ನಿರ್ಮಾಪಕ ಶ್ರೀ ಕೃಷ್ಣ ಜಿ. ಮಂಜೇಶ್ವರ, ಚಿತ್ರಕಲಾ ಶಿಕ್ಷಕ ಶ್ರೀ ತಾರಾನಾಥ ಕೈರಂಗಳ, ಅಬ್ಬಕ್ಕ ಟಿ.ವಿ. ಆಡಳಿತ ನಿರ್ದೇಶಕ ಶ್ರೀ ಶಶಿಧರ ಪೊಯ್ಯತ್ತಬೈಲ್ ಇವರು ಶ್ರೀ ಗುರುದೇವಾನುಗ್ರಹ ಪುರಸ್ಕಾರ ಸ್ವೀಕರಿಸಿದರು.

ಶ್ರೀ ಹನುಮಗಂಗಾ ಪುಷ್ಕರಿಣಿಯನ್ನು ಶ್ರೀ ಸಂಸ್ಥಾನಕ್ಕೆ ಸಮರ್ಪಿಸಿದ





ಮುಂಬೈನ ಉದ್ಯಮಿ ಶ್ರೀ ವಾಮಯ್ಯ ಬಿ. ಶೆಟ್ಟಿ ಮತ್ತು ಶ್ರೀಮತಿ ರೇವತಿ ವಿ. ಶೆಟ್ಟಿ ದಂಪತಿ ಹಾಗೂ ತಾಂತ್ರಿಕ ನಿರ್ವಹಣೆಗೈದ ಒಡಿಯೂರು ಶ್ರೀ ಗುರುದೇವ ಸೇವಾ ಬಳಗದ ಅಧ್ಯಕ್ಷ ಶ್ರೀ ಅಶೋಕ್‌ಕುಮಾರ್ ಎ. ದಂಪತಿಗಳನ್ನು ಪೂಜ್ಯ ಶ್ರೀಗಳವರು ಸಮ್ಮಾನಿಸಿ ಹರಸಿದರು.

ಒಡಿಯೂರು ಶ್ರೀ ಗುರುದೇವ ಗುರುಕುಲದ ಶಿಕ್ಷಕಿ ಶ್ರೀಮತಿ ಸಾಯೀಶ-ರೀ ಡಿ. ಶೆಟ್ಟಿ, ಒಡಿಯೂರು ಶ್ರೀ ಸೌ.ಸ.ನಿಯಮಿತದ ಬೆಳ್ತಂಗಡಿ ಶಾಖಾ ವ್ಯವಸ್ಥಾಪಕ ಶ್ರೀ ನಿತ್ಯಾನಂದ ಶೆಟ್ಟಿ ಮನವಳಿಕೆ, ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆಯ ಬಂಟ್ವಾಳ ವಿಸ್ತರಣಾಧಿಕಾರಿ ಶ್ರೀ ಸದಾಶಿವ ಅಳಿಕೆ, ಒಡಿಯೂರು ಜೈ ಗುರುದೇವ ಕಲಾಕೇಂದ್ರದ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯ ಒಡಿಯೂರು, ಶ್ರೀ ಗುರುದೇವ ಪ್ರೌಢಶಾಲಾ ಮುಖ್ಯಶಿಕ್ಷಕ ಶ್ರೀ ಜಯಪ್ರಕಾಶ್ ಶೆಟ್ಟಿ, ಶಿಕ್ಷಕಿ ಕು। ಸವಿತಾ ಅವರು ಶ್ರೀ ಗುರುದೇವಾನುಗ್ರಹ ಪುರಸ್ಕಾರ ಪಡೆದ ಸಾಧಕರ ಪರಿಚಯವನ್ನು ವಾಚಿಸಿದರು. ಕಾರ್ಯಕ್ರಮದಲ್ಲಿ ಬಾಕ್ರಬೈಲ್‌ನ ನೆರೆ ಸಂತ್ರಸ್ತರಾದ ಶ್ರೀಮತಿ ಶೋಭಾ ಹಾಗೂ ಶ್ರೀಮತಿ ಪ್ರಮೀಳಾ ಅವರಿಗೆ ಪರಿಹಾರ ಧನ ರೂಪಾಯಿ 25,000/- ರಂತೆ ಚೆಕ್ ವಿತರಿಸಲಾಯಿತು.

ಶ್ರೀ ಗುರುದೇವ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕಿ ಶ್ರೀಮತಿ ರೇಣುಕಾ ಎಸ್.ರೈ ಆಶಯಗೀತೆಯೊಂದಿಗೆ ಆರಂಭಗೊಂಡ ಸಭೆಯಲ್ಲಿ ಹಿರಿಯ ಪತ್ರಕರ್ತ ಶ್ರೀ ಯಶವಂತ ವಿಟ್ಲ ನಿರೂಪಿಸಿ, ಸ್ವಾಗತಿಸಿದರು. ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದ ಸಂಚಾಲಕ ಶ್ರೀ ಗಣಪತಿ ಭಟ್ ಸೇರಾಜೆ ವಂದಿಸಿದರು.

**ಧಾರ್ಮಿಕ ಕಾರ್ಯಕ್ರಮ:**

ಬೆಳಿಗ್ಗೆ ಆರಾಧ್ಯದೇವರಿಗೆ ಮಹಾಪೂಜೆ, ನಾಗಸನ್ನಿಧಿಯಲ್ಲಿ ನಾಗತಂಬಿಲದ ಬಳಿಕ ಪೂಜ್ಯ ಶ್ರೀಗಳವರಿಂದ ಹಾಲು ಎರೆಯುವ ಮೂಲಕ ಶ್ರೀ ಹನುಮಗಂಗಾ ಪುಷ್ಕರಿಣಿ ಸಮರ್ಪಣೆಗೊಂಡಿತು. ಮಧ್ಯಾಹ್ನ ಶ್ರೀ ಚಂಡಿಕಾ ಯಾಗದ ಪೂರ್ಣಾಹುತಿ, ಮಹಾಪೂಜೆ ನೆರವೇರಿತು. ಅಪರಾಹ್ಣ ಸಾಂಸ್ಕೃತಿ-ಕ ಕಾರ್ಯಕ್ರಮದಂಗವಾಗಿ ಪ್ರಸಿದ್ಧ ಯಕ್ಷಗಾನ ಕಲಾವಿದರ ಕೂಡುವಿಕೆಯಲ್ಲಿ ಚಂದ್ರಾವಳಿ ವಿಲಾಸ ಯಕ್ಷಗಾನ ಪ್ರದರ್ಶನಗೊಂಡಿತು. ಸಂಜೆ ಸಾರ್ವಜನಿಕ ಶ್ರೀ ಸ್ವಯಂವರ ಪಾರ್ವತೀ ಪೂಜೆ, ಅಷ್ಟಾವಧಾನ ಸೇವೆ, ರಾತ್ರಿ ರಂಗಪೂಜೆ, ಶ್ರೀ ಭದ್ರಕಾಳಿಗೆ ವಿಶೇಷ ಪೂಜೆ ಸಂಪನ್ನಗೊಂಡಿತು.

## "ಶಿಬಿರಗಳ ಮೂಲಕ ಪ್ರತಿಭೆಗಳ ಅನಾವರಣ" ಶರದೃತು ಸಂಸ್ಕಾರ ಶಿಬಿರ ಉದ್ಘಾಟಿಸಿ ಒಡಿಯೂರು ಶ್ರೀಗಳವರಿಂದ ಆಶೀರ್ವಚನ

**ಅ.5:** "ಶರನ್ನವರಾತ್ರಿಯಲ್ಲಿ ಶರದೃತುವಿನ ನೆನಪಾಗುವುದು ಸಹಜ. ಈ ಸಮಯದಲ್ಲಿ ಆಕಾಶವು ಶುಭ್ರವಾಗಿ ನೀಲವಾಗಿರುತ್ತದೆ. ನಮ್ಮ ಮನಸ್ಸು ಕೂಡಾ ಎಲ್ಲಾ ದುಃಖ-ದುಮ್ಮಾನಗಳನ್ನು ಬಿಟ್ಟು ಶಾಂತವಾಗಿ, ವಿಶಾಲವಾಗಿರಬೇಕೆಂಬುದೇ ಇದರ ಸಂದೇಶ. ಈ ಸುಸಂದರ್ಭ ಶರದೃತು ಶಿಬಿರವನ್ನು ಇಲ್ಲಿ ಆಯೋಜಿಸಲಾಗಿದೆ. ತಮ್ಮ ಪ್ರತಿಭೆಗಳನ್ನು ಅರಳಿಸಲು ಇಂತಹ ವೇದಿಕೆಗಳನ್ನು ಮಕ್ಕಳು ಉಪಯೋಗಿಸಿಕೊಳ್ಳಬೇಕು. ವಾಲ್ಮೀಕಿಗೆ ಉತ್ತಮ ಸಂಸ್ಕಾರ ಸಿಕ್ಕಿದಾಗ ಅವನಿಂದ ಶ್ರೀ ಮದ್ರಾಮಾಯಣ ಎಂಬ ಮಹಾಕಾವ್ಯ ಉದಿಸಿತು. ಆ ಮೂಲಕ ಧರ್ಮದ ಸಂದೇವು ನಮಗೊದಗಿ-ತು. ಶಿಬಿರಗಳ ಮೂಲಕ ಪ್ರತಿಭೆಗಳ ಅನಾವರಣದೊಂದಿಗೆ ವ್ಯಕ್ತಿತ್ವವು ವಿಕಸನಗೊಳಿಸಲು ಸಾಧ್ಯ. ಶಿಸ್ತು, ಸಂಯಮವನ್ನು ಬೆಳೆಸುವುದಕ್ಕೂ ಪೂರಕ. ದೇಹ ಮತ್ತು ಮನಸ್ಸಿನ ನಿಯಂತ್ರಣಕ್ಕೆ, ಬದುಕಿನ ಸಾರ್ಥಕತೆ ಯೋಗ ಅಗತ್ಯ. ಯೋಗಾಭ್ಯಾಸವನ್ನೂ ಸಹ ಈ ಶಿಬಿರದಲ್ಲಿ ಜೋಡಿಸಲಾಗಿದೆ" ಎಂದು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು ಒಡಿಯೂರು ಶ್ರೀ ಗುರುದೇವ ಜ್ಞಾನಮಂದಿರದಲ್ಲಿ ಆಯೋಜಿಸಲಾದ ಮೂರು ದಿನಗಳ 'ಶರದೃತು ಶಿಬಿರ'ವನ್ನು ದೀಪೋಜ್ವಲನಗೈದು ಉದ್ಘಾಟಿಸಿ ಆಶೀರ್ವಚನಗೈದರು.

ವೇದಿಕೆಯಲ್ಲಿ ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಉಗ್ಗಪ್ಪ ಶೆಟ್ಟಿ ಕೊಂಬಿಲ, ಹಿರಿಯ ಪತ್ರಕರ್ತ ಶ್ರೀ ಯಶವಂತ ವಿಟ್ಲ, ಮೈತ್ರೇಯೀ ಗುರುಕುಲದ ಭಗಿನಿಯರು, ಒಡಿಯೂರು ಶ್ರೀ ಗುರುದೇವ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ರೇಣುಕಾ ಎಸ್. ರೈ, ಶಾಲಾ ವಿದ್ಯಾರ್ಥಿ ನಾಯಕ ಮಾ। ಸಂದೇಶ್ ಶೆಟ್ಟಿ, ಶ್ರೀ ಗುರುದೇವ ಬಾಲವಿಕಾಸ ಕೇಂದ್ರ, ಕುಡ್ತಲ್ತಡ್ಕದ ವಿದ್ಯಾರ್ಥಿನಿ ಕು। ದೀಕ್ಷಿತಾ ಉಪಸ್ಥಿತರಿದ್ದರು.

ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದ ಸಂಚಾಲಕ ಶ್ರೀ ಗಣಪತಿ ಭಟ್ ಸೇರಾಜೆ ಸ್ವಾಗತಿಸಿ, ಪ್ರಸ್ತಾವನೆಗೈದರು. ಶಿಕ್ಷಕಿ ಶ್ರೀಮತಿ ಅನಿತಾ ನಿರೂಪಣೆಗೈದು, ಪ್ರೌಢಶಾಲಾ ಮುಖ್ಯ ಶಿಕ್ಷಕ ಶ್ರೀ ಜಯಪ್ರಕಾಶ್ ಶೆಟ್ಟಿ ವಂದಿಸಿದರು.





## "ಕಲೆಯನ್ನು ಪ್ರೀತಿಸಬೇಕು" ಶರದೃತು ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭದಲ್ಲಿ ಒಡಿಯೂರು ಶ್ರೀಗಳವರಿಂದ ಆಶೀರ್ವಚನ

**ಅ.7:** "ಯಾವುದೇ ಮಾಧ್ಯಮದಲ್ಲಿ ಶಿಕ್ಷಣ ಪಡೆದರೂ ನಮಗೆ ಸಂಸ್ಕೃತ ಮತ್ತು ಕನ್ನಡದ ಅರಿವಿರಬೇಕು. ತಾನು ಮಾಡುವ ಕಾರ್ಯದಲ್ಲಿ ನಮಗೆ ದೃಢ ಮನಸ್ಸಿದ್ದರೆ ಯಾವುದನ್ನೂ ಸಾಧಿಸಲು ಸಾಧ್ಯ. ಜೀವನ ಮೌಲ್ಯವನ್ನು ಬೆಳೆಸಿಕೊಂಡು ಭಾರತೀಯತೆ ಬಗ್ಗೆ ಗೌರವವನ್ನಿರಿಕೊಂಡಿರಬೇಕು. ಕಲೆ ನಮ್ಮಲ್ಲಿ ತುಂಬಬೇಕಾದರೆ ಅದನ್ನು ಪ್ರೀತಿಸಬೇಕು. ನಮ್ಮ ಬದುಕು ಬಣ್ಣದ ಬದುಕು ಅನ್ನುತ್ತಾರೆ. ಅಂದರೆ ಸುಂದರವಾಗಿರಬೇಕೆನ್ನುವುದೇ ಮಾರ್ಮಿಕ ಸತ್ಯ. ಸುಸಂಸ್ಕೃತ ಬದುಕಿಗೆ ಬೆಳಕು ಚೆಲ್ಲುವಂತಹ ಪಾಠ ಇಂತಹ ಶಿಬಿರದಿಂದ ಲಭ್ಯವಾಗುತ್ತದೆ. ಇದರ ಉದ್ದೇಶ ಅದೇ ಆಗಿದೆ. ಭಗವಂತ ಕೊಟ್ಟ ಶರೀರವೆಂಬ ಆಯುಧವನ್ನು ಸರಿಯಾಗಿ ಬಳಸಿಕೊಂಡಾಗ ಸಾರ್ಥಕತೆ ಇದೆ. ಅಖಂಡ ಭಾರತದ ನಿರ್ಮಾಣದ ಕನಸಿಗೆ ನಾವೆಲ್ಲರೂ ಕೈಜೋಡಿಸೋಣ. ರಾಷ್ಟ್ರಪ್ರೇಮಿಗಳಾಗೋಣ" ಎಂದು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು ಒಡಿಯೂರು ಶ್ರೀ ಗುರುದೇವ ಜ್ಞಾನಮಂದಿರದಲ್ಲಿ ಆಯೋಜಿಸಲಾದ ಮೂರು ದಿನಗಳ 'ಶರದೃತು ಶಿಬಿರ'ದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನಗೈದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶಿವಗಿರಿ ಕಲ್ಲಡ್ಕ, ಯೋಗ ತರಬೇತಿ ನೀಡಿದ ಮೈತ್ರೇಯಿ ಗುರುಕುಲದ ಭಗಿನಿ ಕು। ವಿದ್ಯಾಧರೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಕೇರಳ ಸರಕಾರದ ಸಾರಿಗೆ ಇಲಾಖೆ ಅಧಿಕಾರಿ ಶ್ರೀ ಅಜಿತ್‌ಕುಮಾರ್ ಪಂದಳಮ್, ಸ್ಟಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್ ಆಫ್ ಇಂಡಿಯ ಇದರ ಅಧಿಕಾರಿ ಶ್ರೀಮತಿ ರೋಹಿಣಿ ಅಜಿತ್‌ನಾಥ್ ಪಂದಳಮ್, ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆಯ ಯೋಜನಾ ನಿರ್ದೇಶಕ ಶ್ರೀ ಯು. ಕಿರಣ್, ಒಡಿಯೂರು ಶ್ರೀ ಸಂಸ್ಥಾನದ ಕಾರ್ಯನಿರ್ವಾಹಕ ಶ್ರೀ ಪದ್ಮನಾಭ ಒಡಿಯೂರು ಉಪಸ್ಥಿತರಿದ್ದರು.

ಶಾಲಾ ವಿದ್ಯಾರ್ಥಿನಿಯರಾದ ಕು। ಕೃತಿ ಶೆಟ್ಟಿ ಸ್ವಾಗತಿಸಿ, ಕು। ಯಶಸ್ವಿನಿ ವಂದಿಸಿದರು. ಕು। ನಿಧಿ ಬನಾರಿ ಕಾರ್ಯಕ್ರಮ ನಿರೂಪಿಸಿದರು.

ಬಳಿಕ ಶಿಬಿರಾರ್ಥಿಗಳಿಂದ ಕಿರುಪ್ರಹಸನ, ಯೋಗ ಪ್ರಾತ್ಯಕ್ಷಿಕೆ ನಡೆಸಿದರು.

## “ವ್ಯಕ್ತಿ ವಿಕಾಸದಿಂದಲೇ ಗ್ರಾಮ ವಿಕಾಸ”
## ‘ಸಂಸ್ಕೃತಿ ಸಂಸ್ಕಾರ’ ಕಾರ್ಯಕ್ರಮದಲ್ಲಿ ಒಡಿಯೂರು ಶ್ರೀಗಳವರಿಂದ ಆಶೀರ್ವಚನ

**ಸೆ.17:** “ಧರ್ಮ ಎಂಬ ಪದವು ಶ್ರೇಷ್ಠವಾದದ್ದು. ಸಕಾಲದ ಅಭ್ಯುದಯಕ್ಕೆ ಹುಟ್ಟಿದ್ದು ಧರ್ಮ ಎಂದು ತಿಳಿಸಿದರು. ಮಕ್ಕಳಲ್ಲಿ ಸಂಸ್ಕೃತದ ಅರಿವನ್ನು ಮೂಡಿಸುವ ಕಾರ್ಯವಾಗಬೇಕು. ಆಗ ಮಾತ್ರ ಸುಸಂಸ್ಕೃತ ಜೀವನ ನಡೆಸಲು ಸಾಧ್ಯ. ಸಂಸ್ಕೃತಿಯ ಸರದಾರನಾಗಬೇಕು. ವ್ಯಕ್ತಿಯ ವಿಕಾಸದಿಂದ ಗ್ರಾಮ ವಿಕಾಸವಾಗಿ ಮುಂದಕ್ಕೆ ದೇಶವೇ ವಿಕಾಸವಾಗುತ್ತದೆ” ಎಂದು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು ಸಂದೇಶ ನೀಡಿದರು.

ಒಡಿಯೂರು ಶ್ರೀ ಸಂಸ್ಥಾನದ ಶ್ರೀ ಗುರುದೇವ ಜ್ಞಾನ ಮಂದಿರದಲ್ಲಿ ಜರಗಿದ ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆಯ ಮಾಸಿಕ ಸಭೆ “ಸಂಸ್ಕೃತಿ-ಸಂಸ್ಕಾರ” ಕಾರ್ಯಕ್ರಮದಲ್ಲಿ ಆಶೀರ್ವಚನಗೈದ ಪೂಜ್ಯ ಶ್ರೀಗಳವರು “ಪ್ರಿಯವಾದದ್ದು ಹಿತವಾಗಿರಬೇಕೆಂದೇನಿಲ್ಲಾ, ಹಿತವಾದ್ದು ಪ್ರಿಯವಾಗಿರಬೇಕೆಂದೇನಿಲ್ಲಾ ಎಂದು ಹಿತ-ಅಹಿತಗಳ ಬಗ್ಗೆ ಆಶೀರ್ವಚನ ನೀಡಿ ಸುಳ್ಯ ತಾಲೂಕಿನ ಪರಂಪರೆಯ ಬಗ್ಗೆ ಹಾಗೂ ತುಳುನಾಡ್ದ ಜಾತ್ರೆ (ಬಲೇ ತೇರ್ ಒಯಿಪುಗಾ)ಕಾರ್ಯಕ್ರಮದಲ್ಲಿ ಸುಳ್ಯ ತಾಲೂಕಿನಲ್ಲಿ ಸಹಕರಿಸಿದವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮ ಯೋಜನೆಯ ಸುಳ್ಯ ತಾಲೂಕಿನ ಉತ್ತರ ಮತ್ತು ಪೂರ್ವ ವಲಯದ ಮಂದಿ ಭಾಗವಹಿಸಿದ್ದ ಸಭೆಯಲ್ಲಿ ಘಟಸಮಿತಿಗಳ ಪದಾಧಿಕಾರಿಗಳು ದೀಪ ಪ್ರಜ್ವಲನೆಗೈದರು. ಉತ್ತರ ವಲಯ ಸಂಯೋಜಕಿ ಗೀತಾ ಕಾರ್ಯಕ್ರಮ ನಿರೂಪಿಸಿದರು. ಬೀದಿಗುಡ್ಡೆ ಸೇವಾದೀಕ್ಷಿತೆ ನವೀನ ಕುಮಾರಿ ಸ್ವಾಗತಿಸಿದರು.

---

**ಸತ್ಕರ್ಮಗಳಿಂದ ಶಕ್ತಿವಂತರಾಗಬೇಕು. ಆ ಮೂಲಕ ಆತ್ಮಬಲವನ್ನು ವೃದ್ಧಿಸಿಕೊಳ್ಳಬೇಕು. ಆತ್ಮಬಲದಿಂದ ದಿವ್ಯತ್ವವನ್ನು ಹೊಂದುವುದೇ ಬದುಕಿನ ಧ್ಯೇಯ. ತಾಳ್ಮೆಯೆಂಬುದು ಬದುಕಿನ ಸಾರ್ಥಕತೆಗೆ ಮೂಲ ಆಧಾರ. ಶ್ರದ್ಧೆ, ಶಿಸ್ತಿನೊಂದಿಗೆ ತಾಳ್ಮೆಯೂ ಮೈಗೂಡಿದರೆ, ಯಾವುದೇ ಕಾರ್ಯವೂ ಅಸಾಧ್ಯವಲ್ಲ, ತಾಳ್ಮೆಯೇ ಜೀವನದ ಯಶಸ್ಸಿನ ಮಾರ್ಗ. – ಒಡಿಯೂರು ಶ್ರೀ**





## ಪರಿಭ್ರಮಣ

## “ಪ್ರಾಕೃತಿಕ ಆಹಾರಗಳಿಂದ ಆರೋಗ್ಯ ಸದೃಢ”
## ಸಾಯನ್ ನಿತ್ಯಾನಂದ ಸಭಾಗೃಹದಲ್ಲಿ ಒಡಿಯೂರು ಶ್ರೀ ಸಂದೇಶ

**ಸಾಯನ್:** “ಧರ್ಮಯುಕ್ತವಾದ ಕರ್ಮವನ್ನು ಮಾಡಿದಾಗ ಜೀವನ ಸಫಲವಾಗುತ್ತದೆ. ಮನಸ್ಸಿದ್ದರೆ ಮಾರ್ಗ ಎಂಬಂತೆ ನಾವು ಕಲ್ಲಿನಲ್ಲಿ ದೇವರನ್ನು ಕಾಣುವವರು. ಭಕ್ತಿ ಎಂಬುದು ಬಹಿರಂಗವಾಗದೆ ಅಂತರಂಗದಿಂದ ಉದಿಸಿದಾಗ ಮಾತ್ರ ಪರಮಾತ್ಮನ ದರ್ಶನವಾಗುವುದು. ನಾವೆಲ್ಲರೂ ತುಳುನಾಡಿನವರಾಗಿದ್ದು ನಮ್ಮ ಬದುಕಿನಲ್ಲಿ ನಿಯಮ ಪಾಲನೆ ರೂಢಿಯಾಗಿ ಬಂದಿದೆ. ನಗುತ್ತಾ ಇದ್ದರೆ ನಮ್ಮೆಲ್ಲಾ ಸಮಸ್ಯೆಗಳು ನಮ್ಮಿಂದ ದೂರವಾಗುವುದು. ಆಧುನಿಕ ಆಹಾರಗಳಿಗೆ ಮಾರುಹೋಗದೆ, ತುಳುನಾಡಿನ ಪ್ರಾಕೃತಿಕ ಆಹಾರಗಳ ಸೇವನೆಯಿಂದ ಆರೋಗ್ಯ ಸುದೃಢವಾಗಿರುತ್ತದೆ. ಧಾರ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತವಾಗುತ್ತದೆ. ಭಗವಂತನ ಅನುಗ್ರಹವೂ ಲಭ್ಯವಾಗುತ್ತದೆ” ಎಂದು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರು ಆಶೀರ್ವಚನಗೈದರು.

ಆ.8ರಂದು ಸಾಯನ್‌ನ ಸ್ವಾಮಿ ನಿತ್ಯಾನಂದ ಸಭಾಗೃಹದಲ್ಲಿ ಒಡಿಯೂರು ಶ್ರೀ ಗುರುದೇವ ಸೇವಾ ಬಳಗ ಮತ್ತು ಒಡಿಯೂರು ಶ್ರೀ ವಜ್ರಮಾತಾ ಮಹಿಳಾವಿಕಾಸ ಕೇಂದ್ರ ಮುಂಬೈ ಘಟಕ ಹಾಗೂ ಸಭಾಗೃಹದ ಮ್ಹಾಲಕರು ಆಯೋಜಿಸಿದ್ದ ಪೂಜ್ಯ ಶ್ರೀಗಳವರಿಗೆ ಗುರುವಂದನೆ ಹಾಗೂ ಸಾರ್ವಜನಿಕ ಕಾರ್ಯಕ್ರಮವನ್ನು ದೀಪ ಪ್ರಜ್ವಲನಗೈದು ಉದ್ಘಾಟಿಸಿದ ಪೂಜ್ಯ ಶ್ರೀಗಳವರು “ನಿಸರ್ಗ ಮನುಷ್ಯನ ಆಸೆಯನ್ನು ಪೂರೈಸುತ್ತದೆ. ಆದರೆ ದುರಾಸೆಗಳನ್ನಲ್ಲ. ಪ್ರತಿ ಮನುಷ್ಯನಲ್ಲೂ ಸಂಕಲ್ಪ ಶಕ್ತಿ ಇದೆ. ನಿತ್ಯಾನಂದರ ಈ ಪುಣ್ಯತಿಥಿಯಂದು ಗುರುತತ್ತ್ವ, ಹಾಗೂ ಅವರ ಸಂದೇಶಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಪಾವನವಾಗುತ್ತದೆ” ಎಂದರು.

ಕಾರ್ಯಕ್ರಮದ ಆರಂಭದಲ್ಲಿ ನಿತ್ಯಾನಂದ ಸಭಾಗೃಹದ ನಿತ್ಯಾನಂದ ಕ್ಯಾಟರರ್ಸ್‌ನ ಮ್ಹಾಲಕ, ಕಾರ್ಯಕ್ರಮದ ಉಸ್ತುವಾರಿಯನ್ನು ವಹಿಸಿದ್ದ ಶ್ರೀ ಐಕಳ ವಿಶ್ವನಾಥ ಶೆಟ್ಟಿ ದಂಪತಿ ಶ್ರೀಗುರುಪಾದುಕಾರಾಧನೆಗೈದರು.

ಸಮಾರಂಭದಲ್ಲಿ ಸಾಧ್ವಿ ಶ್ರೀ ಶ್ರೀ ಮಾತಾನಂದಮಯೀ ದಿವ್ಯ

ಉಪಸ್ಥಿತಿಯನ್ನು ಕರುಣಿಸಿ ಸುಶ್ರಾವ್ಯ ಗೀತೆಯನ್ನು ಹಾಡಿದರು.

ಬಳಗದ ಅಧ್ಯಕ್ಷ ನ್ಯಾಯವಾದಿ ಶ್ರೀ ಕೃಷ್ಣ ಎಲ್. ಶೆಟ್ಟಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಪೇಟೆಮನೆ ಪ್ರಕಾಶ್ ಕೆ. ಶೆಟ್ಟಿ ಪ್ರಸ್ತಾವನೆಗೈದು ಕಾರ್ಯಕ್ರಮ ನಿರೂಪಿಸಿದರು.

ಸಭಾಗೃಹದ ಮ್ಹಾಲಕರಾದ ಶ್ರೀಮತಿ ಶಾಂಭವಿ ಬಾಬು ಶೆಟ್ಟಿ, ಶ್ರೀಮತಿ ಸರೋಜಿನಿ ಹಿರಿಯಣ್ಣ ಶೆಟ್ಟಿಯವರು ಉಪಸ್ಥಿತರಿದ್ದರು. ಬೋಂಬೇ ಬಂಟ್ಸ್ ಅಸೋಸಿಯೇಶನ್‌ನ ಅಧ್ಯಕ್ಷ ನ್ಯಾಯವಾದಿ ಶ್ರೀ ಸುಭಾಶ್ ಬಿ. ಶೆಟ್ಟಿ, ಬಳಗದ ಹಾಗೂ ಮಹಿಳಾ ವಿಕಾಸ ಕೇಂದ್ರ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

ಸೇರಿದ್ದ ಎಲ್ಲಾ ಗುರುಬಂಧುಗಳಿಗೆ ಪೂಜ್ಯ ಶ್ರೀಗಳವರು ಫಲಮಂತ್ರಾಕ್ಷತೆ ನೀಡಿ ಹರಸಿದರು. ಕಾರ್ಯಕ್ರಮದ ಆಯೋಜಕರು ಅನ್ನಪ್ರಸಾದದ ವ್ಯವಸ್ಥೆಯನ್ನು ಮಾಡಿದ್ದರು.

## ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆ, ಸುಳ್ಯ ತಾಲೂಕು ಉಚಿತ ನೇತ್ರ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರ

**ಗುತ್ತಿಗಾರು:** ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರ ಕೃಪಾಶೀರ್ವಾದದೊಂದಿಗೆ ಒಡಿಯೂರು ಶ್ರೀ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ (ರಿ.) ಸಂಚಾಲಿತ ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆ ಸುಳ್ಯ ತಾಲೂಕು ಮತ್ತು ಒಡಿಯೂರು ಶ್ರೀ ಗುರುದೇವಾ ಸೇವಾ ಬಳಗ ಸುಳ್ಯ ಮತ್ತು ಗುತ್ತಿಗಾರು ಘಟಸಮಿತಿ ಇವರ ನೇತೃತ್ವದಲ್ಲಿ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಮತ್ತು ಸುಳ್ಯ ನೇತ್ರ ಜ್ಯೋತಿ ಚಾರಿಟೇಬಲ್ ಟ್ರಸ್ಟ್ ಡಾ। ಪಿ.ದಯಾನಂದ ಪೈ ಮತ್ತು ಪಿ. ಸತೀಶ್ ಪೈ ಚಾರಿಟೇಬಲ್ ಟ್ರಸ್ಟ್(ರಿ) ಸೆಂಚುರಿ ಗ್ರೂಪ್ಸ್ ಬೆಂಗಳೂರು, ಎಸ್ಸಿಲೋರ್ ವಿಷನ್ ಫೌಂಡೇಶನ್ ಇವರ ಜಂಟಿ ಆಶ್ರಯದಲ್ಲಿ ದಿನಾಂಕ 22-09-2019ರಂದು ನಡೆದ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಹಾಲೆಮಜಲು ವೆಂಕಟೇಶ್ವರ ಸಭಾಭವನದಲ್ಲಿ ನಡೆದ ಉಚಿತ ನೇತ್ರ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರವನ್ನು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಸಾಧ್ವಿ ಶ್ರೀ ಶ್ರೀ ಮಾತಾನಂದಮಯೀ ಅವರು ಉದ್ಘಾಟಿಸಿದರು.





ಸಭೆಯ ಅಧ್ಯಕ್ಷತೆಯನ್ನು ಗುತ್ತಿಗಾರಿನ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಅಚ್ಚುತ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗುತ್ತಿಗಾರು ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಮುಳಿಯ ಕೇಶವ ಭಟ್, ಗುತ್ತಿಗಾರು ರಬ್ಬರ್ ಸೊಸೈಟಿ ನಿರ್ದೇಶಕರಾದ ಶ್ರೀಮತಿ ಶಶಿಕಲಾ ಡಿ.ಪಿ., ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆ ನಿರ್ದೇಶಕರಾದ ಶ್ರೀ ಯು. ಕಿರಣ್, ಪ್ರಸಾದ್ ನೇತ್ರಾಲಯದ ವೈದ್ಯರಾದ ಡಾ. ತೇಜ, ಒಡಿಯೂರು ಶ್ರೀ ಗುರುದೇವ ಸೇವಾ ಬಳಗ ಸುಳ್ಯ ಇದರ ಅಧ್ಯಕ್ಷ ಶ್ರೀ ರಾಧಕೃಷ್ಣ ಪಕ್ಕಳ, ದಕ್ಷಿಣವಲಯದ ವಲಯ ಅಧ್ಯಕ್ಷ ಶ್ರೀ ಗೋಪಾಲಕೃಷ್ಣ ಪಾಟಾಳಿ, ಗುತ್ತಿಗಾರು ಘಟಸಮಿತಿ ಅಧ್ಯಕ್ಷರಾದ ಶ್ರೀ ಉಮೇಶ್ ಆಚಾರ್ಯ ಉಪಸ್ಥಿತರಿದ್ದರು. ಸೇವಾದೀಕ್ಷಿತೆ ವಾಣಿಶ್ರೀ ಹಾಗೂ ಸಂಘದ ಸದಸ್ಯರಾದ ವಿದ್ಯಾ ಇವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಆರಂಭಿಸಲಾಯಿತು. ಶ್ರೀ ಕೃಷ್ಣ ಭಜನಾ ಮಂಡಳಿಯ ಅಧ್ಯಕ್ಷರಾದ ಶ್ರೀ ಕಿಶೋರ್‌ಕುಮಾರ್ ಅವರು ನಿರೂಪಣೆ ಮಾಡಿದರು. ದಕ್ಷಿಣವಲಯದ ಸಂಯೋಜಕಿ ಶ್ರೀಮತಿ ಹರಿಣಾಕ್ಷಿಯವರು ಸ್ವಾಗತಿಸಿದರು. ಮರ್ಕಂಜ ಘಟಸಮಿತಿಯ ಕಾರ್ಯದರ್ಶಿ ಶ್ರೀಮತಿ ದೇವಕಿ ಬೊಳ್ಳಾಜೆ ವಂದನಾರ್ಪಣೆಗೈದರು.


॥ ಜೈ ಗುರುದೇವ್ ॥

**ಒಡಿಯೂರು ಶ್ರೀ ಗುರುದೇವ ಸೇವಾ ಬಳಗ**

**ಒಡಿಯೂರು ಶ್ರೀ ವಜ್ರಮಾತಾ ಮಹಿಳಾವಿಕಾಸ ಕೇಂದ್ರ, ದಾವಣಗೆರೆ**

**ಆತ್ಮೀಯ ಆಮಂತ್ರಣ**

ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ **ತಾ.27-11-2019ನೇ ಬುಧವಾರ** ಸಂಜೆ ಒಡಿಯೂರು ಶ್ರೀ ಗುರುದೇವ ಸೇವಾ ಬಳಗ ಮತ್ತು ಒಡಿಯೂರು ಶ್ರೀ ವಜ್ರಮಾತಾ ಮಹಿಳಾವಿಕಾಸ ಕೇಂದ್ರ, ದಾವಣಗೆರೆ ಘಟಕದ **ವಾರ್ಷಿಕೋತ್ಸವ**ವು ನಡೆಯಲಿದೆ.

ತಮಗೆಲ್ಲರಿಗೂ ಆತ್ಮೀಯ ಸ್ವಾಗತ ಬಯಸುವ

**ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸರ್ವಸದಸ್ಯರು**

## 'ದತ್ತಪ್ರಕಾಶ'ಕ್ಕೆ ಹಾರ್ದಿಕ ಶುಭಾಶಯಗಳು



# ಶ್ರೀಮತಿ ಮತ್ತು ಶ್ರೀ ದಯಾನಂದ ಹೆಗ್ಡೆ

## ಮುಲುಂಡ್, ಮುಂಬೈ





## 'ದತ್ತಪ್ರಕಾಶ'ಕ್ಕೆ ಹಾರ್ದಿಕ ಶುಭಾಶಯಗಳು



# ಶ್ರೀಮತಿ ಮತ್ತು

# ಶ್ರೀ ವಾಮಯ್ಯ ಬಿ.ಶೆಟ್ಟಿ

## ಚೆಂಬೂರು, ಮುಂಬೈ

# ‘ದತ್ತಪ್ರಕಾಶ’ಕ್ಕೆ ಹಾರ್ದಿಕ ಶುಭಾಶಯಗಳು

## ಶ್ರೀ ಗುರುದೇವ ಪಬ್ಲಿಕ್ ಚ್ಯಾರಿಟೇಬಲ್ ಟ್ರಸ್ಟ್ (ರಿ.)

(ಶಿಕ್ಷಣ, ಗ್ರಾಮಾಭಿವೃದ್ಧಿ, ಸಾಮಾಜಿಕ ಸೇವೆಗಾಗಿ ಹುಟ್ಟುಹಾಕಲಾದ ಸಂಸ್ಥೆ)

## ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್

ಅಂಚೆ: ಒಡಿಯೂರು-574 243, ಬಂಟ್ವಾಳ ತಾಲೂಕು, ದ.ಕ., ಕರ್ನಾಟಕ

web: www.shreeodiyoor.org email: info@shreeodiyoor.org

ಈ ಟ್ರಸ್ಟಿಗೆ ನೀಡುವ ದೇಣಿಗೆಯು ಆದಾಯಕರದಿಂದ ವಿನಾಯಿತಿ ಹೊಂದಿರುತ್ತದೆ.

Donations to Shree Gurudeva Public Charitable Trust(R.), Odiyoor from 01-04-2010 are exempt from Income Tax as per section 80(G) of the Income Tax Act 1961 vide letter dated 20-07-2010 and having reference No. G-1/80 G (R) CIT/MNG- issued by the commissioner of Income Tax, Mangalore.

| ಸಂಸ್ಕಾರ | ಸಹಕಾರ | ಸಂಘಟನೆ | ಸಮೃದ್ಧಿ |
|---|---|---|---|
| (Value Education) | (Co-operation) | (Unity) | (Development) |

Edited, Printed and Published by M.S.Bhat on behalf of
Datta Tatwa Jnana Prachara Samithi, Sri Gurudevadatta Samsthanam, Odiyoor
and Printed at Prem Sai Printers & Publishers, Mangalore





ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಇದರ 18ನೇ ಸಾಮಾನ್ಯ ಸಭೆಯಲ್ಲಿ ‘ಉತ್ತಮ ಸೌಹಾರ್ದ ಸಹಕಾರಿ’ ಪ್ರಶಸ್ತಿಯನ್ನು ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷ ಲ। ಎ. ಸುರೇಶ್ ರೈ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಉಗ್ಗಪ್ಪ ಶೆಟ್ಟಿ ಕೊಂಬಿಲ ಇವರು ಸ್ವೀಕರಿಸಿದರು



ತಾ. 09-09-2019ರಂದು ಒಡಿಯೂರು ಶ್ರೀ ಗುರುದೇವ ಐ.ಟಿ.ಐ.ನಲ್ಲಿ ಆಯೋಜಿಸಿದ್ದ ‘ಇಂಜಿನಿಯರ್ಸ್ ಡೇ’ ಆಚರಣೆ – ಪೂಜ್ಯ ಶ್ರೀಗಳವರಿಂದ ಆಶೀರ್ವಚನ



ಶ್ರೀ ಸಂಸ್ಥಾನದಲ್ಲಿ ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠವು ಆಯೋಜಿಸಿದ್ದ (ತಾ.05-10-2019ರಿಂದ 07-10-2019ರ ತನಕ) 3 ದಿನಗಳ ‘ಶರದೃತು ಸಂಸ್ಕಾರ ಶಿಬಿರ’. ಪೂಜ್ಯ ಶ್ರೀಗಳವರಿಂದ ಉದ್ಘಾಟನೆ